# ಇಸ್ತಿಗ್ಫಾರ್ ಮಾಡುವ ಅತಿಶ್ರೇಷ್ಠ ವಿಧಾನ

شرح حديث سيد الاستغفار

< الكنادي >

ಅಬ್ದುರ್ರಝ್ಝಾಕ್ ಇಬ್ನ್ ಅಬ್ದುಲ್ ಮುಹ್ಸಿನ್ ಅಲ್‌ಬದ್ರ್

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಹಸೈನಾರ್ ಸಲಾಹೀ

# شرح حديث سيد الاستغفار

عبد الرزاق بن عبد المحسن البدر

ترجمة: محمد حمزة البتوري

مراجعة: حسينار الصلاحي

# ಪ್ರಸ್ತಾವನೆ

ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ

ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು. ನಾವು ಅವನನ್ನು ಸ್ತುತಿಸುತ್ತೇವೆ, ಅವನೊಂದಿಗೆ ಸಹಾಯ ಬೇಡುತ್ತೇವೆ, ಅವನೊಂದಿಗೆ ಪಾಪಮುಕ್ತಿಯನ್ನು ಬೇಡುತ್ತೇವೆ ಮತ್ತು ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳುತ್ತೇವೆ. ನಮ್ಮ ಶರೀರಗಳ ಕೆಡುಕುಗಳಿಂದ ಮತ್ತು ನಮ್ಮ ಕರ್ಮಗಳ ದುಷ್ಪರಿಣಾಮಗಳಿಂದ ನಾವು ಅವನಲ್ಲಿ ರಕ್ಷೆಯನ್ನು ಬೇಡುತ್ತೇವೆ. ಅಲ್ಲಾಹು ಯಾರಿಗೆ ಮಾರ್ಗದರ್ಶನ ಮಾಡುತ್ತಾನೋ ಅವನನ್ನು ಪಥಭ್ರಷ್ಟಗೊಳಿಸುವವರಾರೂ ಇಲ್ಲ. ಅವನು ಯಾರನ್ನು ಪಥಭ್ರಷ್ಟಗೊಳಿಸುತ್ತಾನೋ ಅವನಿಗೆ ಮಾರ್ಗದರ್ಶನ ಮಾಡುವವರಾರೂ ಇಲ್ಲ. ಆರಾಧನೆಯ ನೈಜ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದು ನಾನು ಸಾಕ್ಷಿ ವಹಿಸುತ್ತೇನೆ, ಮತ್ತು ಮುಹಮ್ಮದ್(ﷺ)ರವರು ಅಲ್ಲಾಹನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿ ವಹಿಸುತ್ತೇನೆ. ಅಲ್ಲಾಹು ಅವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳೆಲ್ಲರ ಮೇಲೂ ಸಲಾತ್ ಮತ್ತು ಸಲಾಮನ್ನು ವರ್ಷಿಸಲಿ.

ಮುಂದುವರಿದು ಹೇಳುವುದೇನೆಂದರೆ,

ಇಸ್ತಿಗ್ಫಾರ್ ಮಾಡುವ ಈ ವಿಷಯವು, ಅಂದರೆ ಅಲ್ಲಾಹನಲ್ಲಿ ಪಾಪಮುಕ್ತಿಯನ್ನು ಬೇಡುವ ಈ ವಿಷಯವು, ಒಬ್ಬ ಮುಸ್ಲಿಮ್ ತನ್ನ

ಜೀವನದಲ್ಲಿ ಅತ್ಯಧಿಕ ಪ್ರಾಮುಖ್ಯತೆ ನೀಡಬೇಕಾದ ಮತ್ತು ಅತಿಯಾಗಿ ಗಮನಹರಿಸಬೇಕಾದ ವಿಷಯಗಳಲ್ಲೊಂದಾಗಿದೆ. ಇಸ್ತಿಗ್ಫಾರ್ ಮಾಡುವುದನ್ನು ಪ್ರೇರೇಪಿಸುವ ಮತ್ತು ಇಸ್ತಿಗ್ಫಾರ್ ಮಾಡಬೇಕೆಂದು ಆದೇಶಿಸುವ ಅನೇಕ ವಚನಗಳು, ಮತ್ತು ಇಸ್ತಿಗ್ಫಾರ್ ಮಾಡುವುದರ ಶ್ರೇಷ್ಠತೆಗಳನ್ನು, ಇಸ್ತಿಗ್ಫಾರ್ ಮಾಡುವ ಜನರ ಶ್ರೇಷ್ಠತೆಗಳನ್ನು ಮತ್ತು ರೂಢಿಯಾಗಿ ಇಸ್ತಿಗ್ಫಾರ್ ಮಾಡುತ್ತಿರುವವರ ಶ್ರೇಷ್ಠತೆಗಳನ್ನು ವಿವರಿಸುವ ಅನೇಕ ವಿವರಣೆಗಳು ಮಹಾಮಹಿಮನಾದ ಅಲ್ಲಾಹನ ಗ್ರಂಥದಲ್ಲಿ ಮತ್ತು ಅವನ ರಸೂಲರ(ﷺ) ಸುನ್ನತ್ತಿನಲ್ಲಿ ಹೇರಳವಾಗಿ ಕಾಣಬಹುದು.

## ಇಸ್ತಿಗ್ಫಾರ್ ಮಾಡುವುದರ ಶ್ರೇಷ್ಠತೆಗಳು

ಸರ್ವ ನ್ಯೂನತೆಗಳಿಂದ ಮುಕ್ತನಾಗಿರುವ ಮತ್ತು ಅತ್ಯುನ್ನತನಾಗಿರುವ ಅಲ್ಲಾಹು ಹೇಳುತ್ತಾನೆ:

﴿۞قُلْ يَٰعِبَادِيَ ٱلَّذِينَ أَسْرَفُواْ عَلَىٰٓ أَنفُسِهِمْ لَا تَقْنَطُواْ مِن رَّحْمَةِ ٱللَّهِۚ إِنَّ ٱللَّهَ يَغْفِرُ ٱلذُّنُوبَ جَمِيعًاۚ إِنَّهُۥ هُوَ ٱلْغَفُورُ ٱلرَّحِيمُ ٥٣﴾ [الزمر: 53]

.

**"ಹೇಳಿರಿ: ಪಾಪಗಳನ್ನು ಮಾಡುವ ಮೂಲಕ ಸ್ವತಃ ತಮ್ಮ ಶರೀರಗಳ ಮೇಲೆಯೇ ಅನ್ಯಾಯವೆಸಗಿರುವ ಓ ನನ್ನ ದಾಸರೇ! ಅಲ್ಲಾಹನ ಕರುಣೆಯ ಬಗ್ಗೆ ನೀವು ನಿರಾಶರಾಗಬೇಡಿ. ಖಂಡಿತವಾಗಿಯೂ ಅಲ್ಲಾಹು ಸರ್ವ ಪಾಪಗಳನ್ನೂ ಕ್ಷಮಿಸುತ್ತಾನೆ. ಖಂಡಿತವಾಗಿಯೂ ಅವನು ಅತ್ಯಧಿಕ**

**ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿದ್ದಾನೆ."** [ಕುರ್‌ಆನ್ 39:53]

ಸಲಫ್‌ಗಳ (ಪೂರ್ವಿಕ ಸಜ್ಜನರ) ಪೈಕಿ ಕೆಲವರು ಹೇಳುವ ಪ್ರಕಾರ ಈ ಆಯತ್, **"ಅಲ್ಲಾಹನ ಗ್ರಂಥದಲ್ಲಿರುವ ಆಯತ್‌ಗಳ ಪೈಕಿ ಅತಿ ಹೆಚ್ಚು ಶುಭನಿರೀಕ್ಷೆ ನೀಡುವ ಆಯತ್ ಆಗಿದೆ."** (1)

ಇಸ್ತಿಗ್ಫಾರ್ ಮಾಡುವುದನ್ನು ಪ್ರಚೋದಿಸುವುದಕ್ಕಾಗಿ ಮತ್ತು ಇಸ್ತಿಗ್ಫಾರ್ ಮಾಡುವುದರಿಂದ ಇಹಲೋಕದಲ್ಲಿ ಹಾಗೂ ಪರಲೋಕದಲ್ಲಿ ಲಭ್ಯವಾಗುವ ಶ್ರೇಷ್ಠತೆ ಮತ್ತು ಪ್ರತಿಫಲವನ್ನು ವಿವರಿಸುವುದಕ್ಕಾಗಿ ಅಲ್ಲಾಹು ನೂಹ್(ﷺ)ರವರ ಮಾತನ್ನು ಪ್ರಸ್ತಾಪಿಸುತ್ತಾ ಹೇಳುತ್ತಾನೆ:

﴿ فَقُلْتُ ٱسْتَغْفِرُوا۟ رَبَّكُمْ إِنَّهُۥ كَانَ غَفَّارًا ﴿١٠﴾ يُرْسِلِ ٱلسَّمَآءَ عَلَيْكُم مِّدْرَارًا ﴿١١﴾ وَيُمْدِدْكُم بِأَمْوَٰلٍ وَبَنِينَ وَيَجْعَل لَّكُمْ جَنَّٰتٍ وَيَجْعَل لَّكُمْ أَنْهَٰرًا ﴿١٢﴾ ﴾ [نوح: 10–12].

**"ನಾನು (ನೂಹ್) ಹೇಳಿದೆ: ನೀವು ನಿಮ್ಮ ರಬ್ಬಿನೊಂದಿಗೆ ಇಸ್ತಿಗ್ಫಾರ್ ಮಾಡಿರಿ. ಖಂಡಿತವಾಗಿಯೂ ಅವನು ಅತ್ಯಧಿಕ ಕ್ಷಮಿಸುವವನು. ಅವನು ನಿಮಗೆ ಹೇರಳ ಮಳೆಯನ್ನು ಸುರಿಸುವನು, ಸಂಪತ್ತು ಮತ್ತು ಸಂತತಿಯಲ್ಲಿ ನಿಮಗೆ ಅಭಿವೃದ್ಧಿಯನ್ನು ನೀಡುವನು ಹಾಗೂ ನಿಮಗೆ ತೋಟಗಳನ್ನು ಮತ್ತು ನದಿಗಳನ್ನು ಉಂಟು ಮಾಡಿಕೊಡುವನು."** [ಕುರ್‌ಆನ್ 71:10–12]

---

[1] ಈ ಮಾತು ಅಲೀ(ﷺ)ರದ್ದೆಂದು ಹೇಳಲಾಗುತ್ತದೆ. ಅದೇ ರೀತಿ ಇಬ್ನ್ ಮಸ್‌ಊದ್(ﷺ)ರದ್ದೆಂದು ಹೇಳಲಾಗುತ್ತದೆ. ನೋಡಿ: ಇಬ್ನ್ ಜಝೀಯವರ 'ಅತ್ತಸ್‌ಹೀಲ್' (1/1853). ಅಲ್‌ಕುರ್ತುಬೀ (8/349) ಇದನ್ನು ಇಬ್ನ್ ಉಮರ್(ﷺ)ರವರ ಮಾತೆಂದು ಹೇಳಿದ್ದಾರೆ.

ಈ ಮಹತ್ವಪೂರ್ಣವಾದ ಆಯತ್, ಇಸ್ತಿಗ್ಫಾರ್ ಮಾಡುವವರಿಗೆ ಮತ್ತು ರೂಢಿಯಾಗಿ ಇಸ್ತಿಗ್ಫಾರ್ ಮಾಡುತ್ತಿರುವವರಿಗೆ ಲಭ್ಯವಾಗುವ ಅನೇಕ ಪ್ರಯೋಜನಗಳನ್ನು ವಿವರಿಸುತ್ತದೆ.

ಒಮ್ಮೆ ಒಬ್ಬ ವ್ಯಕ್ತಿ ಪ್ರಸಿದ್ಧ ತಾಬಿಈವರ್ಯರಾದ ಅಲ್‌ಹಸನ್ ಅಲ್‌ಬಸ್ರೀ(ﷺ)ರವರ ಬಳಿಗೆ ಬಂದು ಕ್ಷಾಮದ ಬಗ್ಗೆ ಅಳಲನ್ನು ತೋಡಿಕೊಂಡಾಗ, ಅವರು ಹೇಳಿದರು: **"ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡಿರಿ."** ಇನ್ನೊಬ್ಬ ವ್ಯಕ್ತಿ ಬಂದು ತನ್ನ ತೋಟದಲ್ಲಿ ನೀರು ಬತ್ತಿ ಹೋಗಿರುವುದರ ಬಗ್ಗೆ ಅಳಲನ್ನು ತೋಡಿಕೊಂಡಾಗ, ಅವರು ಹೇಳಿದರು: **"ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡಿರಿ."** ಇನ್ನೊಬ್ಬ ವ್ಯಕ್ತಿ ಬಂದು ತನಗೆ ಸಂತಾನವಿಲ್ಲವೆಂದು ಅಳಲನ್ನು ತೋಡಿಕೊಂಡಾಗ, ಅವರು ಹೇಳಿದರು: **"ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡಿರಿ."** ನಂತರ ಅವರು (ಅಲ್‌ಹಸನ್ ಅಲ್‌ಬಸ್ರೀ) ಮೇಲಿನ ಆಯತ್ತನ್ನು ಪಾರಾಯಣ ಮಾಡಿದರು. (2)

ಇವೆಲ್ಲವೂ ಇಸ್ತಿಗ್ಫಾರ್ ಮಾಡುವ ವ್ಯಕ್ತಿಗೆ ಇಹಲೋಕದಲ್ಲಿ ಸಿಗುವ ಪ್ರತಿಫಲಗಳು ಮತ್ತು ಪ್ರಯೋಜನಗಳು.

ಇನ್ನು ಪರಲೋಕದ ಬಗ್ಗೆ ಹೇಳುವುದಾದರೆ, ಇಸ್ತಿಗ್ಫಾರ್ ಮಾಡುವ ವ್ಯಕ್ತಿಗೆ ಅಲ್ಲಿ ಸಿಗುವ ಪ್ರಯೋಜನಗಳು ಮತ್ತು ಲಾಭಗಳು ಹೇರಳ. ಇದಕ್ಕೆ ಪುರಾವೆಯಾಗಿ ಪ್ರವಾದಿ(ﷺ)ರವರ ಒಂದೇ ಒಂದು ವಚನ ನಮಗೆ ಧಾರಾಳ ಸಾಕು:

ಪ್ರವಾದಿ(ﷺ)ರವರು ಹೇಳುತ್ತಾರೆ:

---

[2] ಹಾಫಿಝ್ ಇಬ್ನ್ ಹಜರ್ ತಮ್ಮ 'ಫತ್‌ಹುಲ್ ಬಾರಿ'ಯಲ್ಲಿ (11/98) ಇದನ್ನು ಪ್ರಸ್ತಾಪಿಸಿದ್ದಾರೆ.

{طُوبَى لِمَنْ وُجِدَ فِي صَحِيفَتِهِ اسْتِغْفَارًا كَثِيرًا} رواه ابن ماجه وصححه الألباني.

**“ಯಾರ ಕರ್ಮಪುಸ್ತಕದಲ್ಲಿ ಅತ್ಯಧಿಕ ಇಸ್ತಿಗ್ಫಾರ್ ಕಂಡುಬರುತ್ತದೋ ಅವನಿಗೆ ಶುಭವಾಗಲಿ.”** [3]

ಇಸ್ತಿಗ್ಫಾರ್ ಮಾಡಲು ಪ್ರೇರೇಪಿಸುವ ಮತ್ತು ಇಸ್ತಿಗ್ಫಾರ್ ಮಾಡುವುದರ ಶ್ರೇಷ್ಠತೆಯನ್ನು ವಿವರಿಸುವ ಇನ್ನೂ ಅನೇಕ ವಚನಗಳನ್ನು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವು ಹೀಗಿವೆ:

1. ಅನಸ್ ಇಬ್ನ್ ಮಾಲಿಕ್(ರ)ರವರ ಹದೀಸ್. ಇಮಾಮ್ ಅತ್ತಿರ್ಮಿದೀ ಮತ್ತಿತರರು ವರದಿ ಮಾಡಿದ ಈ ಹದೀಸಿನಲ್ಲಿ ಅವರು (ಅನಸ್) ಹೇಳುತ್ತಾರೆ:

قَالَ رَسُولُ اللَّهِ ﷺ: {قَالَ اللَّهُ تَعَالَى: يَا ابْنَ آدَمَ، إِنَّكَ مَا دَعَوْتَنِي وَرَجَوْتَنِي غَفَرْتُ لَكَ عَلَى مَا كَانَ فِيكَ وَلَا أُبَالِي، يَا ابْنَ آدَمَ، لَوْ بَلَغَتْ ذُنُوبُكَ عَنَانَ السَّمَاءِ ثُمَّ اسْتَغْفَرْتَنِي غَفَرْتُ لَكَ وَلَا أُبَالِي، يَا ابْنَ آدَمَ، إِنَّكَ لَوْ أَتَيْتَنِي بِقُرَابِ الْأَرْضِ خَطَايَا ثُمَّ لَقِيتَنِي لَا تُشْرِكُ بِي شَيْئًا لَأَتَيْتُكَ بِقُرَابِهَا مَغْفِرَةً} رواه الترمذي والدارمي وحسنه الألباني.

[3] ಇಬ್ನ್ ಮಾಜ (3818); ಅಲ್‌ಅಲ್ಬಾನೀ ತಮ್ಮ ‘ಸಹೀಹುಲ್ ಜಾಮಿಅ್’ನಲ್ಲಿ (3825) ಇದನ್ನು ಸಹೀಹ್ ಎಂದಿದ್ದಾರೆ.

**“ಅಲ್ಲಾಹನ ರಸೂಲ್(ﷺ)ರವರು ಹೇಳಿದರು: ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ: ಓ ಆದಮ್ ಪುತ್ರನೇ! ನೀನು ನನ್ನಲ್ಲಿ ಪ್ರಾರ್ಥಿಸುತ್ತಿರುವ ತನಕ ಮತ್ತು ನೀನು ನನ್ನಲ್ಲಿ ಶುಭನಿರೀಕ್ಷೆಯನ್ನಿಡುತ್ತಿರುವ ತನಕ ನಿನ್ನಲ್ಲಿ ಏನೇ ತಪ್ಪುಗಳಿದ್ದರೂ ನಾನು ನಿನ್ನನ್ನು ಕ್ಷಮಿಸುವೆನು. ನನಗೆ ಅದೊಂದು ವಿಷಯವೇ ಅಲ್ಲ. ಓ ಆದಮ್ ಪುತ್ರನೇ! ನಿನ್ನ ಪಾಪಗಳು ಆಕಾಶದ ‘ಅನಾನನ್ನು’ ತಲುಪಿದರೂ, ತರುವಾಯ ನೀನು ನನ್ನೊಂದಿಗೆ ಇಸ್ತಿಗ್ಫಾರ್ ಮಾಡುವುದಾದರೆ ನಾನು ನಿನ್ನನ್ನು ಕ್ಷಮಿಸುವೆನು. ನನಗೆ ಅದೊಂದು ವಿಷಯವೇ ಅಲ್ಲ. ಓ ಆದಮ್ ಪುತ್ರನೇ! ನೀನು ಭೂಮಿ ತುಂಬಾ ಪಾಪಗಳನ್ನು ಮಾಡಿ, ನನ್ನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದ (ಶಿರ್ಕ್ ಮಾಡದ) ಸ್ಥಿತಿಯಲ್ಲಿ ನನ್ನನ್ನು ಭೇಟಿಯಾಗುವುದಾದರೆ, ಭೂಮಿ ತುಂಬಾ ಕ್ಷಮೆಯೊಂದಿಗೆ ನಾನು ನಿನ್ನನ್ನು ಎದುರುಗೊಳ್ಳುವೆನು.”** [4]

ಈ ಹದೀಸಿನಲ್ಲಿರುವ ಈ ಕೆಳಗಿನ ವಾಕ್ಯ ಗಮನಾರ್ಹವಾಗಿದೆ:

{يَا ابْنَ آدَمَ، لَوْ بَلَغَتْ ذُنُوبُكَ عَنَانَ السَّمَاءِ}

**“ಓ ಆದಮ್ ಪುತ್ರನೇ! ನಿನ್ನ ಪಾಪಗಳು ಆಕಾಶದ ‘ಅನಾನನ್ನು’ ತಲುಪಿದರೂ...”**

ಅನಾನ್ ಎಂದರೆ ಆಕಾಶದಲ್ಲಿರುವ ಮೋಡಗಳೆಂದು ಕೆಲವರು ವ್ಯಾಖ್ಯಾನಿಸಿದ್ದಾರೆ. ಆಕಾಶವನ್ನು ನೋಡುವಾಗ ನಮ್ಮ ದೃಷ್ಟಿ ಎಲ್ಲಿಯ ತನಕ ತಲುಪುತ್ತದೋ ಅದು ಅನಾನ್ ಎಂದು ಇತರ ಕೆಲವರು ವ್ಯಾಖ್ಯಾನಿಸಿದ್ದಾರೆ.

{ثُمَّ اسْتَغْفَرْتَنِي غَفَرْتُ لَكَ وَلَا أُبَالِي}

[4] ಜಾಮಿಉ ತ್ತಿರ್ಮಿದಿ (3540); ಅದ್ದಾರಿಮೀ (2788); ಅಲ್‌ಅಲ್ಬಾನೀ ತಮ್ಮ ‘ಅಸ್ಸಹೀಹಃ’ದಲ್ಲಿ (127) ಇದನ್ನು ಹಸನ್ ಎಂದಿದ್ದಾರೆ.

**“ತರುವಾಯ ನೀನು ನನ್ನೊಂದಿಗೆ ಇಸ್ತಿಗ್ಫಾರ್ ಮಾಡುವುದಾದರೆ ನಾನು ನಿನ್ನನ್ನು ಕ್ಷಮಿಸುವೆನು. ನನಗೆ ಅದೊಂದು ವಿಷಯವೇ ಅಲ್ಲ.”**

ಅಂದರೆ ಪಾಪಗಳು ಎಷ್ಟೇ ಸಂಖ್ಯೆಯಲ್ಲಿದ್ದರೂ, ಯಾವುದೇ ವಿಧದಲ್ಲಿದ್ದರೂ, ಯಾವುದೇ ಗಾತ್ರದಲ್ಲಿದ್ದರೂ, ನೀನು ಪಶ್ಚಾತ್ತಾಪ ಪಟ್ಟು ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡುವುದಾದರೆ ಅಲ್ಲಾಹು ಅವೆಲ್ಲವನ್ನೂ ಕ್ಷಮಿಸುವನು.

2. ಇಮಾಮ್ ಅಲ್‌ಬುಖಾರೀ ವರದಿ ಮಾಡಿದ ಅಬೂ ಹುರೈರಃ(ﷺ)ರವರ ಹದೀಸ್. ಈ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{وَاللَّهِ، إِنِّي لَأَسْتَغْفِرُ اللَّهَ وَأَتُوبُ إِلَيْهِ فِي الْيَوْمِ أَكْثَرَ مِنْ سَبْعِينَ مَرَّةً} رواه البخاري.

**“ಅಲ್ಲಾಹನ ಮೇಲಾಣೆ! ಖಂಡಿತವಾಗಿಯೂ ನಾನು ದಿನನಿತ್ಯ ಎಪ್ಪತ್ತಕ್ಕಿಂತಲೂ ಹೆಚ್ಚು ಸಲ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡುತ್ತಾ ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳುತ್ತೇನೆ.”** (5)

ಅಲ್ಲಾಹು ಪ್ರವಾದಿ(ﷺ)ರವರಿಗೆ ಅವರ ಹಿಂದಿನ ಪಾಪಗಳನ್ನು ಮತ್ತು ಮುಂಬರುವ ಪಾಪಗಳೆಲ್ಲವನ್ನೂ ಕ್ಷಮಿಸಿದ್ದಾನೆ. ಹೀಗಿದ್ದೂ ಅವರು ದಿನನಿತ್ಯ ಎಪ್ಪತ್ತಕ್ಕಿಂತಲೂ ಹೆಚ್ಚು ಬಾರಿ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡುತ್ತಿದ್ದರು. ಮಾತ್ರವಲ್ಲ, ಪ್ರವಾದಿ(ﷺ)ರವರು ಒಂದು ಸಭೆಯಲ್ಲಿ ಕುಳಿತರೆ

---

[5] ಅಲ್‌ಬುಖಾರೀ (6307)

{ رَبِّ اغْفِرْ لِي وَتُبْ عَلَيَّ، إِنَّكَ أَنْتَ التَّوَّابُ الرَّحِيمُ }

**"ಓ ನನ್ನ ರಬ್ಬೇ! ನನ್ನನ್ನು ಕ್ಷಮಿಸು ಮತ್ತು ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು. ಖಂಡಿತವಾಗಿಯೂ ನೀನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವೆ."** ಎಂದು ನೂರು ಬಾರಿ ಹೇಳುವುದನ್ನು ನಾವು ಎಣಿಸುತ್ತಿದ್ದೆವೆಂದು ಇಬ್ನ್ ಉಮರ್(ﷺ) ಹೇಳುತ್ತಾರೆ. [6]

ಪ್ರವಾದಿ(ﷺ)ರವರು ಚಾಚೂ ತಪ್ಪದೆ ದಿನನಿತ್ಯ ನಿರಂತರ ಇಸ್ತಿಗ್ಫಾರ್ ಮಾಡುತ್ತಿದ್ದರೆಂದು ಇದರಿಂದ ತಿಳಿದುಕೊಳ್ಳಬಹುದು.

3. ಇಮಾಮ್ ಮುಸ್ಲಿಮ್ ವರದಿ ಮಾಡಿದ ಅಬೂ ಹುರೈರಃ(ﷺ)ರವರ ಹದೀಸ್. ಈ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{وَالَّذِي نَفْسِي بِيَدِهِ، لَوْ لَمْ تُذْنِبُوا، لَذَهَبَ اللَّهُ بِكُمْ، وَلَجَاءَ بِقَوْمٍ يُذْنِبُونَ فَيَسْتَغْفِرُونَ اللَّهَ، فَيَغْفِرُ لَهُمْ } رواه مسلم.

**"ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ! ನೀವು ಪಾಪಗಳನ್ನು ಮಾಡದಿರುತ್ತಿದ್ದಲ್ಲಿ ಅಲ್ಲಾಹು ನಿಮ್ಮನ್ನು ಅಳಿಸಿ ಹಾಕುತ್ತಿದ್ದನು. ಮತ್ತು ಪಾಪಗಳನ್ನು ಮಾಡುವ ಹಾಗೂ ತಕ್ಷಣ ಅಲ್ಲಾಹನೊಂದಿಗೆ ಇಸ್ತಿಗ್ಫಾರ್**

---

[6] ಅಬೂ ದಾವೂದ್ (1516); ಇಬ್ನ್ ಮಾಜ (3814); ಅತ್ತಿರ್ಮಿದೀ (3434) ಮತ್ತು ಅನ್ನಸಾಈ ತಮ್ಮ 'ಅಲ್‌ಕುಬ್ರಾ'ದಲ್ಲಿ (10292) ಇದನ್ನು ವರದಿ ಮಾಡಿದ್ದಾರೆ. ಅತ್ತಿರ್ಮಿದಿ ಇದನ್ನು ಹಸನ್ ಸಹೀಹ್ ಎಂದಿದ್ದಾರೆ.

**ಮಾಡಿ ಅಲ್ಲಾಹು ಅವರನ್ನು ಕ್ಷಮಿಸುವಂತಹ ಒಂದು ಜನತೆಯನ್ನು ಅವನು ತರುತ್ತಿದ್ದನು."** (7)

ಮಹಾಮಹಿಮನಾದ ಅಲ್ಲಾಹು ಇಸ್ತಿಗ್ಫಾರ್ ಮಾಡುವುದನ್ನು ಮತ್ತು ಇಸ್ತಿಗ್ಫಾರ್ ಮಾಡುವ ಜನರನ್ನು ಎಷ್ಟು ಇಷ್ಟಪಡುತ್ತಾನೆಂದು ಈ ಹದೀಸಿನಿಂದ ಅರ್ಥ ಮಾಡಿಕೊಳ್ಳಬಹುದು.

# ಅತಿಸುಂದರವಾದ ಹೆಸರುಗಳ ಮೂಲಕ ಅಲ್ಲಾಹನಲ್ಲಿ ಪ್ರಾರ್ಥಿಸುವುದು

ಅಲ್‌ಅಫುವ್ವ್ (ಮನ್ನಿಸುವವನು), ಅಲ್‌ಗಫೂರ್ (ಕ್ಷಮಿಸುವವನು), ಅಲ್‌ಗಫ್ಫಾರ್ (ನಿರಂತರ ಕ್ಷಮಿಸುವವನು) ಮೊದಲಾದವುಗಳು ಅಲ್ಲಾಹನ ಅತಿಸುಂದರವಾದ ಹೆಸರುಗಳಲ್ಲಿ ಕೆಲವು. ಅವನ ಹೆಸರುಗಳ ಮೂಲಕ ಅವನಲ್ಲಿ ಪ್ರಾರ್ಥಿಸುವುದನ್ನು ಮತ್ತು ಅವನ ಹೆಸರುಗಳು ಆವಶ್ಯಪಡುವ ಪ್ರಕಾರ ಅವನನ್ನು ಆರಾಧಿಸುವುದನ್ನು ಅವನು ಬಹಳ ಇಷ್ಟಪಡುತ್ತಾನೆ. ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ وَلِلَّهِ ٱلۡأَسۡمَآءُ ٱلۡحُسۡنَىٰ فَٱدۡعُوهُ بِهَاۖ ﴾ [الأعراف: 180] .

**"ಅಲ್ಲಾಹನಿಗೆ ಅತಿ ಸುಂದರವಾದ ಹೆಸರುಗಳಿವೆ. ಆದ್ದರಿಂದ ಅವುಗಳ ಮೂಲಕ ಅವನಲ್ಲಿ ಪ್ರಾರ್ಥಿಸಿರಿ."** [ಕುರ್‌ಆನ್ 7:180]

---

7 ಮುಸ್ಲಿಮ್ (4936)

ಅದೇ ರೀತಿ ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಅಬೂ ಹುರೈರಃ(ﷺ)ರವರ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{إِنَّ لِلَّهِ تِسْعَةً وَتِسْعِينَ اسْمًا، مِائَةً إِلَّا وَاحِدًا، مَنْ أَحْصَاهَا دَخَلَ الْجَنَّةَ}

مُتَّفَقٌ عَلَيهِ.

**“ಖಂಡಿತವಾಗಿಯೂ ಅಲ್ಲಾಹನಿಗೆ ತೊಂಬತ್ತೊಂಬತ್ತು ಹೆಸರುಗಳಿವೆ. ನೂರಕ್ಕೆ ಒಂದು ಕಮ್ಮಿ. ಯಾರು ಅವುಗಳನ್ನು ಇಹ್ಸಾಅ್ ಮಾಡುತ್ತಾನೋ ಅವನು ಸ್ವರ್ಗವನ್ನು ಪ್ರವೇಶಿಸುವನು.”** (8)

ಅಲ್ಲಾಹನ ಹೆಸರುಗಳನ್ನು ಇಹ್ಸಾಅ್ ಮಾಡುವುದು ಎಂದರೆ ಕೆಲವು ಜನರು ಮಾಡುವಂತೆ ಅವಗಳನ್ನು ಬರೆದಿಟ್ಟು, ಪಾರಾಯಣ ಮಾಡುತ್ತಾ ಇರುವುದಲ್ಲ. ಬದಲಾಗಿ ಉಲಮಾಗಳು ಸ್ಪಷ್ಟಪಡಿಸಿದಂತೆ ಇಹ್ಸಾಅ್ ಮಾಡುವುದಕ್ಕೆ ಮೂರು ಹಂತಗಳಿವೆ.

**ಮೊದಲನೆ ಹಂತ:** ಅವುಗಳನ್ನು ಕಂಠಪಾಠ ಮಾಡುವುದು.

**ಎರಡನೆ ಹಂತ:** ಅವುಗಳ ಅರ್ಥಗಳನ್ನು ಗ್ರಹಿಸುವುದು.

**ಮೂರನೆ ಹಂತ:** ಅವುಗಳ ಮೂಲಕ ಅಲ್ಲಾಹನಲ್ಲಿ ಪ್ರಾರ್ಥಿಸುವುದು ಮತ್ತು ಅವುಗಳು ಆವಶ್ಯಪಡುವ ಪ್ರಕಾರ ಕರ್ಮವೆಸಗುವುದು.

ಉದಾಹರಣೆಗೆ, ಅತ್ತವ್ವಾಬ್ (التَّوَّاب) ಎಂಬ ಅಲ್ಲಾಹನ ಹೆಸರು.

1. ನಾವು ಮೊಟ್ಟಮೊದಲು ಈ ಹೆಸರನ್ನು ಕಂಠಪಾಠ ಮಾಡಬೇಕು.

---

[8] ಅಲ್‌ಬುಖಾರೀ (2736, 6410, 7396); ಮುಸ್ಲಿಮ್ (4836)

2. ನಂತರ ಅದರ ಅರ್ಥವನ್ನು ಚೆನ್ನಾಗಿ ಗ್ರಹಿಸಬೇಕು. ಅಲ್ಲಾಹನಿಗೆ ಈ ಹೆಸರು ಇರುವುದರಿಂದ ಅವನು ತನ್ನ ದಾಸರ ಪಶ್ಚಾತ್ತಾಪಗಳನ್ನು (ತೌಬಾಗಳನ್ನು) ಸ್ವೀಕರಿಸುತ್ತಾನೆ, ತೌಬಾ ಮಾಡುವ ತೌಫೀಕನ್ನು ತನ್ನ ದಾಸರಿಗೆ ದಯಪಾಲಿಸುತ್ತಾನೆ, ತನ್ನ ದಾಸರ ಪಶ್ಚಾತ್ತಾಪಪಟ್ಟರೆ ಅವರ ಪಾಪಗಳನ್ನು ಕ್ಷಮಿಸುತ್ತಾನೆ ಮೊದಲಾದವುಗಳು ಈ ಹೆಸರಿನ ಅರ್ಥಗಳಾಗಿವೆ.

3. ಇದರ ಬಳಿಕ, ಈ ಹೆಸರು ಏನನ್ನು ಆವಶ್ಯಪಡುತ್ತದೋ ಅದರ ಪ್ರಕಾರ ಅಮಲ್ ಮಾಡಬೇಕು. ದಾಸರು ತಮ್ಮ ಪಾಪಗಳಿಗಾಗಿ ಅಲ್ಲಾಹನಲ್ಲಿ ಪಶ್ಚಾತ್ತಾಪ ಪಟ್ಟು ಕ್ಷಮೆ ಬೇಡಬೇಕೆಂದು ಈ ಹೆಸರು ಆವಶ್ಯಪಡುತ್ತದೆ. ಆದ್ದರಿಂದ ನಮ್ಮ ಸರ್ವ ಪಾಪಗಳನ್ನೂ ಕ್ಷಮಿಸುವಂತೆ ಅಲ್ಲಾಹನಲ್ಲಿ ಬೇಡುತ್ತಾ, ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳಬೇಕು.

ಅಲ್ಲಾಹನ ಇತರ ಹೆಸರುಗಳನ್ನು ಇಹ್ಸಾಅ್ ಮಾಡುವುದು ಕೂಡ ಇದೇ ರೀತಿಯಲ್ಲಾಗಿರಬೇಕು. ಅಂದರೆ ಅವುಗಳನ್ನು ಕಂಠಪಾಠ ಮಾಡಿ, ನಂತರ ಅವುಗಳ ಸರಿಯಾದ ಅರ್ಥವನ್ನು ಗ್ರಹಿಸಬೇಕು. ಅಲ್ಲಾಹನ ಗುಣವಿಶೇಷಣಗಳನ್ನು ವ್ಯಾಖ್ಯಾನ ಮಾಡುವವರು, ಅವುಗಳನ್ನು ನಿಷೇಧಿಸುವವರು ಮತ್ತು ಅಲ್ಲಾಹು ಹಾಗೂ ಅವನ ರಸೂಲ್(ﷺ)ರವರು ಉದ್ದೇಶಿಸಿದ ಅರ್ಥವಲ್ಲದ ಬೇರೆ ಅರ್ಥಗಳನ್ನು ನೀಡಿ, ಅವುಗಳ ಅರ್ಥಗಳನ್ನು ವಕ್ರಗೊಳಿಸುವವರು ನೀಡುವ ಅರ್ಥಗಳನ್ನು ಸ್ವೀಕರಿಸಬಾರದು. ಬದಲಾಗಿ ಸಹಾಬಾಗಳು ಸೇರಿದಂತೆ ಸಲಫ್‌ಗಳು ಅವುಗಳನ್ನು ಹೇಗೆ ಅರ್ಥ ಮಾಡಿಕೊಂಡರೋ ಹಾಗೆಯೇ ಅರ್ಥ ಮಾಡಿಕೊಳ್ಳಬೇಕು.

ಒಟ್ಟಿನಲ್ಲಿ, ಅಲ್‌ಗಫೂರ್, ಅಲ್‌ಗಫ್ಫಾರ್ ಮತ್ತು ಅಲ್‌ಅಫುವ್ವ್ ಅಲ್ಲಾಹನ ಅತಿ ಸುಂದರವಾದ ಹೆಸರುಗಳಲ್ಲಿ ಸೇರಿದ ಹೆಸರುಗಳು. ಪದೇ

ಪದೇ ಇಸ್ತಿಗ್ಫಾರ್ ಮಾಡುತ್ತಿರಬೇಕು ಮತ್ತು ಅಲ್ಲಾಹನ ಕಡೆಗೆ ತೌಬಾ ಮಾಡಿ ಪಶ್ಚಾತ್ತಾಪ ಪಡುವುದನ್ನು ಹೆಚ್ಚಿಸಬೇಕೆಂದು ಈ ಹೆಸರುಗಳು ಆವಶ್ಯಪಡುತ್ತವೆ. ಯಾಕೆಂದರೆ ಅಲ್ಲಾಹು ಅಲ್‌ಗಫೂರ್ (ಕ್ಷಮಿಸುವವನು) ಆಗಿದ್ದರೂ ಅವನು ಎಲ್ಲರಿಗೂ ಕ್ಷಮಿಸುವುದಿಲ್ಲ. ಬದಲಾಗಿ ಕ್ಷಮೆ ಬೇಡುವವರಿಗೆ ಮಾತ್ರ ಅವನು ಕ್ಷಮಿಸುತ್ತಾನೆ. ಈ ಕಾರಣದಿಂದಲೇ ಅತ್ಯುನ್ನತನಾದ ಅಲ್ಲಾಹು ಆದರಣೀಯ ಕುರ್‌ಆನ್‌ನಲ್ಲಿ ಹೇಳುತ್ತಾನೆ:

﴿ إِنَّ ٱللَّهَ لَا يَغۡفِرُ أَن يُشۡرَكَ بِهِۦ وَيَغۡفِرُ مَا دُونَ ذَٰلِكَ لِمَن يَشَآءُۚ

﴾ [النساء : 48].

**“ತನ್ನೊಂದಿಗೆ ಶಿರ್ಕ್ ಮಾಡಲಾಗುವುದನ್ನು ಖಂಡಿತವಾಗಿಯೂ ಅಲ್ಲಾಹು ಎಂದಿಗೂ ಕ್ಷಮಿಸುವುದಿಲ್ಲ. ಆದರೆ ಅದರ ಹೊರತಾದ ಇತರ ಪಾಪಗಳನ್ನು ಅವನಿಚ್ಛಿಸಿದವರಿಗೆ ಅವನು ಕ್ಷಮಿಸುತ್ತಾನೆ.”** [ಕುರ್‌ಆನ್ 4:48]

ಅಂದರೆ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡುವವರು ಮತ್ತು ಪಾಪಗಳು ಕ್ಷಮಿಸಲ್ಪಡುವುದಕ್ಕಿರುವ ಮಾರ್ಗಗಳನ್ನು ಅನುಸರಿಸುವವರು ಅಲ್ಲಾಹನ ಕ್ಷಮೆಯನ್ನು ಪಡೆಯುತ್ತಾರೆ.

## ಪಾಪಗಳು ಕ್ಷಮಿಸಲ್ಪಡುವುದಕ್ಕಿರುವ ನಿಬಂಧನೆಗಳು

ಪಾಪಗಳು ಕ್ಷಮಿಸಲ್ಪಡುವುದಕ್ಕಿರುವ ಮಾರ್ಗಗಳನ್ನು ಸೂಚಿಸುವ ಸಮಗ್ರ ವಚನಗಳಲ್ಲೊಂದು ಅಲ್ಲಾಹು ಸೂರಃ ತ್ವಾಹಾದಲ್ಲಿ ಹೇಳಿದ ಒಂದು ವಚನ:

﴿ وَإِنِّي لَغَفَّارٌ لِّمَن تَابَ وَءَامَنَ وَعَمِلَ صَٰلِحًا ثُمَّ ٱهۡتَدَىٰ ٨٢ ﴾

[طه: 82] .

**"ಪಶ್ಚಾತ್ತಾಪ ಪಟ್ಟು, ವಿಶ್ವಾಸವಿಟ್ಟು, ಸತ್ಕರ್ಮಗಳನ್ನು ನಿರ್ವಹಿಸಿ, ತರುವಾಯ ಸನ್ಮಾರ್ಗದಲ್ಲಿ ಅಚಲವಾಗಿ ನಿಲ್ಲುವನಿಗೆ ಖಂಡಿತವಾಗಿಯೂ ನಾನು ಕ್ಷಮಿಸುವೆನು."** [ಕುರ್‌ಆನ್ 20:82]

ಅಲ್ಲಾಹನ ಕ್ಷಮೆಯನ್ನು ಪಡೆಯುವುದಕ್ಕಿರುವ ನಿಬಂಧನೆಗಳನ್ನು ಅಲ್ಲಾಹು ಇಲ್ಲಿ ಪ್ರಸ್ತಾಪಿಸಿದ್ದಾನೆ.

**1. ಪಶ್ಚಾತ್ತಾಪ ಪಡುವುದು:** ಅಂದರೆ ಪಾಪಕೃತ್ಯದಿಂದ ಸಂಪೂರ್ಣ ವಿಮುಕ್ತನಾಗಿ, ಅದನ್ನು ನಿರ್ವಹಿಸಿದ್ದಕ್ಕಾಗಿ ವಿಷಾದಪಡುವುದು ಮತ್ತು ಭವಿಷ್ಯದಲ್ಲಿ ಎಂದಿಗೂ ಅದನ್ನು ಪುನರಾವರ್ತಿಸುವುದಿಲ್ಲ ಎಂದು ದೃಢನಿರ್ಧಾರ ಕೈಗೊಳ್ಳುವುದು.

**2. ವಿಶ್ವಾಸವಿಡುವುದು:** ಅಂದರೆ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ ರಸೂಲ್‌ಗಳಲ್ಲಿ ಮತ್ತು ವಿಶ್ವಾಸವಿಡಬೇಕೆಂದು ಅಲ್ಲಾಹು ಹೇಳಿರುವ ಎಲ್ಲ ವಿಷಯಗಳಲ್ಲೂ ವಿಶ್ವಾಸವಿಡುವುದು.

**3. ಸತ್ಕರ್ಮವೆಸಗುವುದು:** ಅಂದರೆ ಇಸ್ಲಾಮ್ ಕಡ್ಡಾಯಗೊಳಿಸಿದ ನಮಾಝ್, ಉಪವಾಸಗಳನ್ನು ನಿರ್ವಹಿಸುವುದು, ಅಲ್ಲಾಹನನ್ನು ಸದಾ ಸ್ಮರಿಸುತ್ತಿರುವುದು, ಅವನು ನನ್ನನ್ನು ನಿರಂತರ ವೀಕ್ಷಿಸುತ್ತಿದ್ದಾನೆಂಬ ಅರಿವಿನಿಂದ ಅವನನ್ನು ಭಯಪಡುವುದು ಮೊದಲಾದ ದೈಹಿಕ ಮತ್ತು ಮಾನಸಿಕ ಸತ್ಕರ್ಮಗಳನ್ನು ನಿರ್ವಹಿಸುವುದು.

**4. ಸನ್ಮಾರ್ಗದಲ್ಲಿ ಅಚಲವಾಗಿ ನಿಲ್ಲುವುದು:** ಅಂದರೆ ವಿಚಲಿತನಾಗದೆ ಸನ್ಮಾರ್ಗದಲ್ಲಿ ನಿಲ್ಲುವುದು ಮತ್ತು ಎಂದಿಗೂ ತನ್ನ ಪೂರ್ವಸ್ಥಿತಿಗೆ ಮರಳದಿರುವುದು. ಮರಣದ ತನಕ ಹೀಗೆಯೇ ಮುಂದುವರಿಯುವುದು.

ಯಾರು ಈ ನಾಲ್ಕು ನಿಬಂಧನೆಗಳನ್ನು ಪೂರೈಸುತ್ತಾರೋ ಅವರ ಪಾಪಗಳನ್ನು ಅಲ್ಲಾಹು ಕ್ಷಮಿಸುತ್ತಾನೆ ಮತ್ತು ಅವರ ನ್ಯೂನತೆಗಳನ್ನು ಮರೆಮಾಚುತ್ತಾನೆ. ಅವರು ಅಲ್ಲಾಹನ ಕ್ಷಮೆಯನ್ನು ಪಡೆದವರಲ್ಲಿ ಸೇರುತ್ತಾರೆ.

ಪಶ್ಚಾತ್ತಾಪವು (ತೌಬಾ) ಅದರ ಹಿಂದಿನ ಪಾಪಗಳೆಲ್ಲವನ್ನು ಅಳಿಸಿಹಾಕುತ್ತದೆ. ಪಾಪಗಳು ಕ್ಷಮಿಸಲ್ಪಡಲು ಪಶ್ಚಾತ್ತಾಪ ಪಡುವುದರ ಹೊರತು ಬೇರೆ ದಾರಿಯೇ ಇಲ್ಲ. ಆದ್ದರಿಂದ ಯಾರು ಅಲ್ಲಾಹನ ಕಡೆಗೆ ಪಶ್ಚಾತ್ತಾಪದೊಂದಿಗೆ ತಿರುಗುತ್ತಾನೋ ಅವರ ಪಾಪಗಳನ್ನು ಅಲ್ಲಾಹು ಕ್ಷಮಿಸುತ್ತಾನೆ. ಅವು ಸಮುದ್ರದ ನೊರೆಗಳಷ್ಟಿದ್ದರೂ ಸಹ. ಅವು ಎಷ್ಟೇ ದೊಡ್ಡ ಸಂಖ್ಯೆಯಲ್ಲಿದ್ದರೂ ಅಲ್ಲಾಹು ಅವುಗಳನ್ನು ಕ್ಷಮಿಸುತ್ತಾನೆ. ಈಗಾಗಲೇ ಉದ್ಧರಿಸಿದ ಆಯತ್ತಿನಲ್ಲಿ ಅಲ್ಲಾಹು ಹೇಳಿರುವಂತೆ:

﴿۞قُلۡ يَٰعِبَادِيَ ٱلَّذِينَ أَسۡرَفُواْ عَلَىٰٓ أَنفُسِهِمۡ لَا تَقۡنَطُواْ مِن رَّحۡمَةِ ٱللَّهِۚ إِنَّ ٱللَّهَ يَغۡفِرُ ٱلذُّنُوبَ جَمِيعًاۚ إِنَّهُۥ هُوَ ٱلۡغَفُورُ ٱلرَّحِيمُ ٥٣﴾ [الزمر: 53]

.

**"ಹೇಳಿರಿ: ಪಾಪಗಳನ್ನು ಮಾಡುವ ಮೂಲಕ ಸ್ವತಃ ತಮ್ಮ ಶರೀರಗಳ ಮೇಲೆ ಅನ್ಯಾಯವೆಸಗಿರುವ ಓ ನನ್ನ ದಾಸರೇ! ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿ. ಖಂಡಿತವಾಗಿಯೂ ಅಲ್ಲಾಹು ಎಲ್ಲ ಪಾಪಗಳನ್ನೂ ಕ್ಷಮಿಸುವನು. ಖಂಡಿತವಾಗಿಯೂ ಅವನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."** [ಕುರ್‌ಆನ್ 39:53]

ಶಿರ್ಕ್ ಮಾಡದಿರುವ ತನಕ ಅಲ್ಲಾಹು ಎಲ್ಲ ಪಾಪಗಳನ್ನೂ ಕ್ಷಮಿಸುತ್ತಾನೆ. ಪಾಪಗಳನ್ನು ಮಾಡುವವರು ಮಾಡಿದ ಪಾಪಗಳು ಯಾವುದೇ ವಿಧದಲ್ಲಿದ್ದರೂ, ಯಾವುದೇ ಗಾತ್ರದಲ್ಲಿದ್ದರೂ, ಎಷ್ಟೇ ದೊಡ್ಡ ಸಂಖ್ಯೆಯಲ್ಲಿದ್ದರೂ, ಅಲ್ಲಾಹನ ಕಡೆಗೆ ಪಶ್ಚಾತ್ತಾಪಪಟ್ಟು ಮರಳಿದರೆ, ಅಲ್ಲಾಹು ಅವುಗಳನ್ನು ಕ್ಷಮಿಸುತ್ತಾನೆ.

# ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನ

ಇಸ್ತಿಗ್ಫಾರ್ ಮಾಡುವುದಕ್ಕೆ ಇಸ್ಲಾಮ್ ಅತ್ಯಧಿಕ ಪ್ರಾಮುಖ್ಯತೆಯನ್ನು ಮತ್ತು ಮಹಾ ಸ್ಥಾನಮಾನವನ್ನು ನೀಡಿದೆ. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುವಂತೆ ಇಸ್ತಿಗ್ಫಾರ್ ಮನುಷ್ಯನನ್ನು ಅನಿಷ್ಟಕರ ಪ್ರವೃತ್ತಿಗಳಿಂದ ಇಷ್ಟಕರ ಪ್ರವೃತ್ತಿಗಳ ಕಡೆಗೆ ಹಾಗೂ ಅಪೂರ್ಣ ಕರ್ಮಗಳಿಂದ ಸಂಪೂರ್ಣ ಕರ್ಮಗಳೆಡೆಗೆ ಕೊಂಡೊಯ್ಯುತ್ತದೆ. ಅದು ಮನುಷ್ಯನನ್ನು ಅಧಮತ್ವದಿಂದ ಉಚ್ಛವಾದ ಸ್ಥಾನದ ಕಡೆಗೆ ಮತ್ತು ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯುತ್ತದೆ. [9]

ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ವರದಿಯಾಗಿರುವ ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನವನ್ನು ನಾವು ಇಲ್ಲಿ ವಿವರಿಸುತ್ತೇವೆ. ಈ ವಿಧಾನವನ್ನು ಉಲಮಾಗಳು ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ಮತ್ತು ಪರಿಪೂರ್ಣ ವಿಧಾನವೆಂದು ಹೇಳಿದ್ದಾರೆ. ಆದ್ದರಿಂದ ಈ ವಿಧಾನವನ್ನು ಕಂಠಪಾಠ ಮಾಡುವುದು, ಅದರ ಅರ್ಥವನ್ನು ಗ್ರಹಿಸುವುದು,

[9] ಮಜ್ಮೂಉಲ್ ಫತಾವಾ 11/696

ಅದರ ನಿಯಮಗಳನ್ನು ಕಲಿಯುವುದು ಮತ್ತು ಅದರ ಪ್ರಕಾರ ಕರ್ಮವೆಸಗುವುದು ಮುಂತಾದವುಗಳಿಗೆ ನಾವು ಅತೀವ ಪ್ರಾಮುಖ್ಯತೆ ನೀಡಬೇಕಾಗಿದೆ.

ಶದ್ದಾದ್ ಇಬ್ನ್ ಔಸ್(ﷺ) ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{سَيِّدُ الاِسْتِغْفَارِ أَنْ يَقُولَ الْعَبْدُ: اللَّهُمَّ أَنْتَ رَبِّي، لَا إِلَهَ إِلَّا أَنْتَ، خَلَقْتَنِي، وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ بِذَنْبِي، فَاغْفِرْ لِي، فَإِنَّهُ لَا يَغْفِرُ الذُّنُوبَ إِلَّا أَنْتَ؛ قَالَ: مَنْ قَالَهَا مِنَ النَّهَارِ مُوقِنًا بِهَا فَمَاتَ مِنْ يَوْمِهِ قَبْلَ أَنْ يُمْسِيَ فَهُوَ مِنْ أَهْلِ الْجَنَّةِ، وَمَنْ قَالَهَا مِنَ اللَّيْلِ وَهُوَ مُوقِنٌ بِهَا فَمَاتَ قَبْلَ أَنْ يُصْبِحَ فَهُوَ مِنْ أَهْلِ الْجَنَّةِ} جَاءَ فِي بَعْضِ الرِّوَايَاتِ: {دَخَلَ الْجَنَّةَ}، وَجَاءَ فِي رِوَايَةٍ ثَالِثَةٍ {إِلَّا وَجَبَتْ لَهُ الْجَنَّةُ}.

**“ಇಸ್ತಿಗ್ಫಾರ್ ಮಾಡುವುದರ ಅತಿಶ್ರೇಷ್ಠ ವಿಧಾನ ಯಾವುದೆಂದರೆ ಒಬ್ಬ ದಾಸ ಈ ರೀತಿ ಹೇಳುವುದು: ಅಲ್ಲಾಹುಮ್ಮ ಅನ್ತ ರಬ್ಬೀ, ಲಾ ಇಲಾಹ ಇಲ್ಲಾ ಅನ್ತ, ಖಲಕ್‌ತನೀ, ವಅನ ಅಬ್ದುಕ, ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು, ಅಊದು ಬಿಕ ಮಿನ್ ಶರ್ರಿ ಮಾ ಸನಅ್‌ತು, ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ, ಫಗ್‌ಫಿರ್ ಲೀ, ಫಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್. ನಂತರ ಪ್ರವಾದಿ(ﷺ)ರವರು ಹೇಳಿದರು: ಯಾರಾದರೂ ದೃಢವಾದ ವಿಶ್ವಾಸದೊಂದಿಗೆ ಹಗಲಿನ ವೇಳೆಯಲ್ಲಿ ಈ ಪ್ರಾರ್ಥನೆಯನ್ನು ಉಚ್ಚರಿಸಿ, ಅದೇ ದಿನ ಸಂಜೆಯಾಗುವುದಕ್ಕೆ ಮುನ್ನ**

**ಮರಣವನ್ನಪ್ಪಿದರೆ ಅವನು ಸ್ವರ್ಗವಾಸಿಯಾಗುವನು. ಯಾರಾದರೂ ದೃಢವಾದ ವಿಶ್ವಾಸದೊಂದಿಗೆ ರಾತ್ರಿಯ ವೇಳೆಯಲ್ಲಿ ಈ ಪ್ರಾರ್ಥನೆಯನ್ನು ಉಚ್ಛರಿಸಿ, ಬೆಳಗಾಗುವುದಕ್ಕೆ ಮುನ್ನ ಮರಣವನ್ನಪ್ಪಿದರೆ ಅವನು ಸ್ವರ್ಗವಾಸಿಯಾಗುವನು.**[10] (ಇನ್ನೊಂದು ವರದಿಯಲ್ಲಿ: **ಸ್ವರ್ಗವನ್ನು ಪ್ರವೇಶಿಸುವನು).**[11] (ಮತ್ತೊಂದು ವರದಿಯಲ್ಲಿ: **ಅವನಿಗೆ ಸ್ವರ್ಗ ಪ್ರವೇಶವು ಕಡ್ಡಾಯವಾಗದೆ ಇರಲಾರದು).** [12]

ಅರ್ಥ: ಓ ಅಲ್ಲಾಹ್! ನೀನು ನನ್ನ ರಬ್ಬ್. ಆರಾಧಿಸಲ್ಪಡುವ ನೈಜ ಹಕ್ಕು ನಿನ್ನ ಹೊರತು ಅನ್ಯರಿಗಿಲ್ಲ. ನೀನು ನನ್ನನ್ನು ಸೃಷ್ಟಿಸಿದವನು ಮತ್ತು ನಾನು ನಿನ್ನ ದಾಸ. ಮತ್ತು ನಾನು ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿರುವೆ. ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ. ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ ಮತ್ತು ನನ್ನ ಸರ್ವ ಪಾಪಗಳನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ನನ್ನನ್ನು ಕ್ಷಮಿಸು. ಯಾಕೆಂದರೆ ಖಂಡಿತವಾಗಿಯೂ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರಾರೂ ಇಲ್ಲ.

ಹದೀಸಿನಿಂದ ಸ್ಪಷ್ಟವಾಗುವಂತೆ ಈ ಪ್ರಾರ್ಥನೆಯನ್ನು ಬೆಳಗ್ಗೆ ಮತ್ತು ಸಂಜೆ ಪ್ರಾರ್ಥಿಸಬೇಕು. ಉಲಮಾಗಳು ಈ ಪ್ರಾರ್ಥನೆಯನ್ನು ಬೆಳಗ್ಗೆ ಮತ್ತು ಸಂಜೆ ಹೇಳುವ ದಿಕ್ರ್‌ಗಳಲ್ಲಿ ಸೇರಿಸಿದ್ದಾರೆ. ಆದ್ದರಿಂದ ಬೆಳಗಾಗುವಾಗ ಮತ್ತು ಸಂಜೆಯಾಗುವಾಗ ಈ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ಯಾರಾದರೂ ಬೆಳಗಾಗುವಾಗ ಈ ಪ್ರಾರ್ಥನೆಯನ್ನು ಪ್ರಾರ್ಥಿಸಿ ಅದೇ ದಿನ ಸಂಜೆಯಾಗುವುದಕ್ಕೆ ಮೊದಲು ಮೃತಪಟ್ಟರೆ ಅವನು

---

[10] ಅಲ್‌ಬುಖಾರಿ (6306, 6323)

[11] ಅಲ್‌ಬುಖಾರಿ (6323)

[12] ಅತ್ತಿರ್ಮಿದಿ (3393)

ಸ್ವರ್ಗವಾಸಿಯಾಗುವನು. ಅದೇ ರೀತಿ ಯಾರಾದರೂ ಸಂಜೆಯಾಗುವಾಗ ಈ ಪ್ರಾರ್ಥನೆಯನ್ನು ಪ್ರಾರ್ಥಿಸಿ ಅದೇ ರಾತ್ರಿ ಬೆಳಗಾಗುವುದಕ್ಕೆ ಮೊದಲು ಮೃತಪಟ್ಟರೆ ಅವನು ಕೂಡ ಸ್ವರ್ಗವಾಸಿ ಯಾಗುವನು. ಸ್ವರ್ಗಪ್ರವೇಶವು ಅವನಿಗೆ ಕಡ್ಡಾಯವಾಗುವುದು.

ಈ ಮಹತ್ವಪೂರ್ಣ ಹದೀಸನ್ನು ಇಮಾಮ್ ಅಲ್‌ಬುಖಾರಿ ತಮ್ಮ ಸಹೀಹ್ ಗ್ರಂಥದ ಕಿತಾಬು ದ್ದಅವಾತ್‌ನಲ್ಲಿ (ಪ್ರಾರ್ಥನೆಗಳ ಪುಸ್ತಕ) 'ಬಾಬು ಅಫ್ದಲಿ ಲಿಸ್ತಿಗ್ಫಾರ್' (ಅತಿಶ್ರೇಷ್ಠವಾದ ಇಸ್ತಿಗ್ಫಾರ್) ಎಂಬ ಅಧ್ಯಾಯದಲ್ಲಿ ಸೇರಿಸಿದ್ದಾರೆ. ಅದೇ ರೀತಿ ಅದೇ ಗ್ರಂಥದ ಇನ್ನೊಂದು ಕಡೆ 'ಬಾಬು ಮಾ ಯಕೂಲು ಇದಾ ಅಸ್ಬಹ' (ಬೆಳಗನ್ನು ಪ್ರವೇಶಿಸುವಾಗ ಏನು ಹೇಳಬೇಕು) ಎಂಬ ಅಧ್ಯಾಯದಲ್ಲೂ ಈ ಹದೀಸನ್ನು ಸೇರಿಸಿದ್ದಾರೆ. ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ಮತ್ತು ಪರಿಪೂರ್ಣ ರೂಪವು ಈ ಪ್ರಾರ್ಥನೆಯನ್ನು ಪ್ರಾರ್ಥಿಸುವುದಾಗಿದೆ ಎಂದು ಇಮಾಮ್ ಅಲ್‌ಬುಖಾರಿಯವರು(ﷺ) ಈ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳಿದ 'ಸಯ್ಯಿದುಲ್ ಇಸ್ತಿಗ್ಫಾರ್' ಎಂಬ ವಾಕ್ಯದಿಂದ ಗ್ರಹಿಸಿದ್ದಾರೆಂದು ಇದರಿಂದ ನಮಗೆ ಮನವರಿಕೆಯಾಗುತ್ತದೆ.

ನಾವು ಈ ಹದೀಸಿನ ಅರ್ಥವನ್ನು, ಮತ್ತು ಈ ಹದೀಸ್ ಒಳಗೊಂಡಿರುವ ಪ್ರಾರ್ಥನೆ, ಶರಣಾಗತಿ, ದೈನ್ಯತೆಯ ಪ್ರದರ್ಶನ, ಸಂಪೂರ್ಣ ಸಮರ್ಪಣೆ, ಸಂಪೂರ್ಣ ಅವಲಂಬನೆ, ಅಲ್ಲಾಹನ ಔದಾರ್ಯ ಮತ್ತು ಅನುಗ್ರಹವನ್ನು ಒಪ್ಪಿಕೊಳ್ಳುವುದು, ಪಾಪಗಳನ್ನು ಕ್ಷಮಿಸಲು ಅಲ್ಲಾಹನ ಹೊರತು ಅನ್ಯರಿಗೆ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಳ್ಳುವುದು ಮೊದಲಾದ ಸಮಗ್ರ ವಿಷಯಗಳನ್ನು ಅರ್ಥ ಮಾಡಿಕೊಳ್ಳುವಾಗ, ಈ ಹದೀಸಿನಲ್ಲಿ ವಿವರಿಸಲಾಗಿರುವ ಇಸ್ತಿಗ್ಫಾರ್ ಮಾಡುವ ವಿಧಾನವು ಅತಿಶ್ರೇಷ್ಠ ವಿಧಾನವಾಗಿದೆ ಎಂದು ನಮಗೆ ಮನದಟ್ಟಾಗುವುದು. ಪ್ರವಾದಿ(ﷺ)ರವರು ಹೇಳಿದಂತೆ ಈ ಪ್ರಾರ್ಥನೆಯನ್ನು ಸಯ್ಯಿದುಲ್ ಇಸ್ತಿಗ್ಫಾರ್ (ಇಸ್ತಿಗ್ಫಾರ್‌ಗಳ

ನಾಯಕ) ಎಂದು ಕರೆಯುವುದಕ್ಕಿರುವ ಎಲ್ಲ ಅರ್ಹತೆಗಳೂ ಈ ಪ್ರಾರ್ಥನೆಗೆ ಇದೆಯೆಂದು ನಮಗೆ ಮನದಟ್ಟಾಗದೆ ಇರಲಾರದು.

ಸಹೀಹುಲ್ ಬುಖಾರಿಯಲ್ಲಿ ಶದ್ದಾದ್ ಇಬ್ನ್ ಔಸ್(ﷺ)ರಿಂದ ವರದಿಯಾಗಿರುವುದು ಈ ಒಂದು ಹದೀಸ್ ಮಾತ್ರ. ಈ ಹದೀಸನ್ನು ಇಮಾಮ್ ಅಲ್‌ಬುಖಾರಿ ಉದ್ಧರಿಸಿದ್ದಾರೆ. ಆದರೆ ಇಮಾಮ್ ಮುಸ್ಲಿಮ್ ಇದನ್ನು ಉದ್ಧರಿಸಿಲ್ಲ. ಇತರ ಇಮಾಮ್‌ಗಳಾದ ಅತ್ತಿರ್ಮಿದಿ ಮತ್ತು ಅನ್ನಸಾಈ ಇದನ್ನು ಭಿನ್ನ ಪದಗಳೊಂದಿಗೆ ಉದ್ಧರಿಸಿದ್ದಾರೆ. ಈ ಭಿನ್ನ ಪದಗಳು ಕೂಡ ಈ ಹದೀಸಿನ ಮಹತ್ವವನ್ನು ವ್ಯಕ್ತಪಡಿಸುತ್ತವೆ. ಅತ್ತಿರ್ಮಿದಿಯ ವರದಿಯಲ್ಲಿರುವಂತೆ ಪ್ರವಾದಿ(ﷺ)ರವರು ಹೇಳುತ್ತಾರೆ:

{أَلَا أَدُلُّكُمْ عَلَى سَيِّدِ الِاسْتِغْفَارِ؟} رواه الترمذي وصححه الألباني.

**“ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನವನ್ನು ನಾನು ನಿಮಗೆ ತಿಳಿಸಿಕೊಡಲೇ?”** (13)

ಅನ್ನಸಾಈಯ ವರದಿಯಲ್ಲಿರುವಂತೆ ಪ್ರವಾದಿ(ﷺ)ರವರು ಹೇಳುತ್ತಾರೆ:

{تَعَلَّمُوا سَيِّدَ الِاسْتِغْفَارِ} رواه النسائي.

**“ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನವನ್ನು ಕಲಿತುಕೊಳ್ಳಿರಿ.”** (14)

[13] ಅತ್ತಿರ್ಮಿದಿ (3393); ಅಲ್‌ಅಲ್ಬಾನೀ ತಮ್ಮ ‘ಅಸ್ಸಹೀಹಃ’ದಲ್ಲಿ (1747) ಇದನ್ನು ಸಹೀಹ್ ಎಂದಿದ್ದಾರೆ.
[14] ಇದನ್ನು ಅನ್ನಸಾಈ ತಮ್ಮ ‘ಅಲ್‌ಕುಬ್ರಾ’ದಲ್ಲಿ (10301–10302) ಜಾಬಿರ್(ﷺ)ರವರಿಂದ ವರದಿ ಮಾಡಿದ್ದಾರೆ.

ಮಹಾಮಹಿಮನಾದ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡುವುದಕ್ಕಿರುವ ಈ ಅತಿಶ್ರೇಷ್ಠ ವಿಧಾನವನ್ನು ಕಲಿಯುವಂತೆ ಪ್ರವಾದಿ(ﷺ)ರವರು ನಮ್ಮನ್ನು ಪ್ರೋತ್ಸಾಹಿಸಿದ್ದಾರೆ.

ಈ ಹದೀಸ್ ಭಿನ್ನ ಪದಗಳಲ್ಲಿ ಅಬೂ ಹುರೈರಃ(ﷺ), ಇಬ್ನ್ ಉಮರ್(ﷺ), ಇಬ್ನ್ ಮಸ್‌ಊದ್(ﷺ), ಇಬ್ನ್ ಅಬ್ಝಾ(ﷺ), ಬುರೈದಃ(ﷺ) ಮೊದಲಾದ ಸಹಾಬಾಗಳಿಂದ ವರದಿಯಾಗಿದೆ. ಆದರೆ ನಾವು ಮೇಲೆ ಪ್ರಸ್ತಾಪಿಸಿದ ರೂಪವು, ಅಂದರೆ ಶದ್ದಾದ್ ಇಬ್ನ್ ಔಸ್(ﷺ)ರವರ ಹದೀಸಿನಲ್ಲಿ ಬಂದಿರುವ ರೂಪವು ಇಮಾಮ್ ಅಲ್‌ಬುಖಾರಿ ತಮ್ಮ ಸಹೀಹ್ ಗ್ರಂಥದಲ್ಲಿ ವರದಿ ಮಾಡಿದ ರೂಪವಾಗಿದೆ.

ನಾವು ಮೊಟ್ಟಮೊದಲು ಈ ಪ್ರಾರ್ಥನೆಯನ್ನು ಕಂಠಪಾಠ ಮಾಡಬೇಕು, ನಂತರ ದಿನನಿತ್ಯ ಬೆಳಗ್ಗೆ ಮತ್ತು ಸಂಜೆ ಚಾಚೂತಪ್ಪದೆ ಈ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ಪ್ರಾರ್ಥಿಸುವುದು ಇದರ ಅರ್ಥವನ್ನು, ಉದ್ದೇಶವನ್ನು ಮತ್ತು ಗುರಿಯನ್ನು ಕಲಿತುಕೊಂಡಾಗಿರಬೇಕು.

ಕೆಲವು ಉಲಮಾಗಳು ಹೇಳುವ ಪ್ರಕಾರ ಈ ಪ್ರಾರ್ಥನೆಯನ್ನು ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನವನ್ನು ಕರೆಯಲು ಕಾರಣ, ಈ ಪ್ರಾರ್ಥನೆಯು ಪಶ್ಚಾತ್ತಾಪದ ಎಲ್ಲ ಅರ್ಥಗಳನ್ನೂ ಸಮಗ್ರವಾಗಿ ಒಳಗೊಂಡಿರುವುದರಿಂದಾಗಿದೆ. (15)

ಇನ್ನು ಈ ಪ್ರಾರ್ಥನೆಯು ಒಳಗೊಂಡಿರುವ ಪದಗಳನ್ನು ಒಂದೊಂದಾಗಿ ಅರ್ಥ ಮಾಡಿಕೊಳ್ಳೋಣ:

---

[15] ನೋಡಿ: ಫತ್‌ಹುಲ್ ಬಾರಿ (11/119), 'ನತಾಇಜುಲ್ ಅಫ್ಕಾರ್ ಫೀ ಶರ್ಹಿ ಹದೀಸಿ ಸಯ್ಯಿದಿಲಿಸ್ತಿಗ್ಫಾರ್' (ಪುಟ 149), ಮಿರ್‌ಆತುಲ್ ಮಫಾತೀಹ್ (8/33).

IslamHouse.com

# ಅಲ್ಲಾಹುಮ್ಮ

{اللَّهُمَّ}

**ಅಲ್ಲಾಹುಮ್ಮ:** ಉಲಮಾಗಳ ಒಮ್ಮತಾಭಿಪ್ರಾಯ ಪ್ರಕಾರ ಇದರ ಅರ್ಥ 'ಓ ಅಲ್ಲಾಹ್!' ಅಲ್ಲಾಹನ ಗ್ರಂಥದಲ್ಲಿ ಮತ್ತು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿರುವ ಪ್ರಾರ್ಥನೆಗಳಲ್ಲಿ ಈ ಪದವನ್ನು ಹೆಚ್ಚಾಗಿ ಕಾಣಬಹುದು.

ಇಬ್ನುಲ್ ಕಯ್ಯಿಮ್(ﷺ) ಹೇಳುತ್ತಾರೆ: "ಅಲ್ಲಾಹುಮ್ಮ ಎಂಬ ಪದದ ಅರ್ಥವು ಓ ಅಲ್ಲಾಹ್! ಎಂದಾಗಿದೆಯೆಂಬ ವಿಷಯದಲ್ಲಿ ಉಲಮಾಗಳ ಮಧ್ಯೆ ಭಿನ್ನಾಭಿಪ್ರಾಯವಿಲ್ಲ. ಈ ಕಾರಣದಿಂದಲೇ ಈ ಪದವನ್ನು ಪ್ರಾರ್ಥನೆಗಳಲ್ಲೇ ಹೆಚ್ಚಾಗಿ ಬಳಸಲಾಗುತ್ತದೆ. 'ಅಲ್ಲಾಹುಮ್ಮ ಗಫೂರುನ್ ರಹೀಮ್' ಎಂದು ಹೇಳುವ ವಾಡಿಕೆಯಿಲ್ಲ. ಬದಲಾಗಿ 'ಅಲ್ಲಾಹುಮ್ಮಗ್ಫಿರ್ ಲೀ ವರ್‌ಹಮ್‌ನೀ' ಎಂದು ಹೇಳಲಾಗುತ್ತದೆ." (16)

# ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್‌ತನೀ ವಅನ ಅಬ್ದುಕ

{أَنْتَ رَبِّي لَا إِلَهَ إِلَّا أَنْتَ خَلَقْتَنِي وَأَنَا عَبْدُكَ}

[16] ಜಲಾಉಲ್ ಅಫ್‌ಹಾಮ್ (ಪುಟ 143)

**ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್‌ತನೀ ವಅನ ಅಬ್ದುಕ** (ನೀನು ನನ್ನ ರಬ್ಬ್. ಆರಾಧಿಸಲ್ಪಡುವ ನೈಜ ಹಕ್ಕು ನಿನ್ನ ಹೊರತು ಅನ್ಯರಿಗಿಲ್ಲ. ನೀನು ನನ್ನನ್ನು ಸೃಷ್ಟಿಸಿದವನು ಮತ್ತು ನಾನು ನಿನ್ನ ದಾಸ). ಈ ವಾಕ್ಯವು ತೌಹೀದಿನ ಎರಡು ವಿಭಾಗಗಳಾದ **ತೌಹೀದುಲ್ ಮಅ್‌ರಿಫತಿ ವಲ್‌ಇಸ್ಬಾತ್** (ಅರಿವು ಮತ್ತು ದೃಢೀಕರಣದ ತೌಹೀದ್) ಹಾಗೂ **ತೌಹೀದುಲ್ ಇರಾದತಿ ವತ್ತಲಬ್** (ಉದ್ದೇಶ ಮತ್ತು ಬೇಡಿಕೆಯ ತೌಹೀದ್) ಗಳನ್ನು ಒಳಗೊಂಡಿದೆ. ಯಾಕೆಂದರೆ ಉಲಮಾಗಳು ಹೇಳುವಂತೆ, ನಮ್ಮೊಂದಿಗೆ ನೈಜೀಕರಿಸಲು, ಪಾಲಿಸಲು ಮತ್ತು ಪೂರ್ಣಗೊಳಿಸಲು ಆದೇಶಿಸಲಾಗಿರುವ ತೌಹೀದ್‌ನ ಎರಡು ವಿಭಾಗಗಳು: ತೌಹೀದುಲ್ ಮಅ್‌ರಿಫತಿ ವಲ್‌ಇಸ್ಬಾತ್ ಮತ್ತು ತೌಹೀದುಲ್ ಇರಾದತಿ ವತ್ತಲಬ್.

**ತೌಹೀದುಲ್ ಮಅ್‌ರಿಫತಿ ವಲ್ ಇಸ್ಬಾತ್** ಎಂದರೆ ಅಲ್ಲಾಹನ ಪ್ರಭುತ್ವ ಮತ್ತು ಒಡೆತನವನ್ನು ಅಂಗೀಕರಿಸುವುದು, ಅವನನ್ನು ರಬ್ಬ್ ಎಂದು, ಸೃಷ್ಟಿಕರ್ತನೆಂದು, ಅನ್ನದಾತನೆಂದು, ಅನುಗ್ರಹದಾತನೆಂದು, ಸೃಷ್ಟಿಗಳ ಕಾರ್ಯಗಳನ್ನು ನಿಯಂತ್ರಿಸಿ ನಿರ್ವಹಿಸುವವನೆಂದು ಒಪ್ಪಿಕೊಳ್ಳುವುದು ಮತ್ತು ಅಂಗೀಕರಿಸುವುದು. ಹಾಗೆಯೇ ಅಲ್ಲಾಹನ ಗ್ರಂಥದಲ್ಲಿ ಮತ್ತು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ಬಂದಿರುವ ಅಲ್ಲಾಹನ ಹೆಸರುಗಳನ್ನು ಮತ್ತು ಗುಣವಿಶೇಷಣಗಳನ್ನು ಅಂಗೀಕರಿಸುವುದು. **ತೌಹೀದುಲ್ ಮಅ್‌ರಿಫತಿ ವಲ್‌ಇಸ್ಬಾತ್** ಎಂಬುದು ತೌಹೀದು ರ್‍ರುಬೂಬಿಯ್ಯಃ ಮತ್ತು ತೌಹೀದುಲ್ ಅಸ್ಮಾಇ ವಸ್ಸಿಫಾತನ್ನು ಸಮಗ್ರವಾಗಿ ಒಳಗೊಳ್ಳುವ ವಿಭಾಗ.

ಇನ್ನೊಂದು ವಿಭಾಗವು **ತೌಹೀದುಲ್ ಇರಾದತಿ ವತ್ತಲಬ್**. ಇದು ತೌಹೀದುಲ್ ಉಲೂಹಿಯ್ಯಃ ಅಥವಾ ತೌಹೀದುಲ್ ಇಬಾದಃವನ್ನು ಒಳಗೊಳ್ಳುವ ವಿಭಾಗ. ಇದರ ಉದ್ದೇಶವು ಇಬಾದತ್‌ಗಳೆಲ್ಲವನ್ನೂ ಅಲ್ಲಾಹನಿಗೆ ಮಾತ್ರ ಸಲ್ಲಿಸುವುದು. ಹೀಗೆ ಈ ಹದೀಸಿನಲ್ಲಿರುವ ಈ ವಾಕ್ಯವು ತೌಹೀದಿನ ಎರಡು ವಿಭಾಗಗಳನ್ನೂ ಒಳಗೊಳ್ಳುತ್ತದೆ.

**ಅಲ್ಲಾಹುಮ್ಮ ಅನ್ತ ರಬ್ಬೀ** (ಓ ಅಲ್ಲಾಹ್! ನೀನು ನನ್ನ ರಬ್ಬ್) ಎಂಬ ವಾಕ್ಯ ಮತ್ತು **ಖಲಕ್‌ತನೀ** (ನೀನು ನನ್ನನ್ನು ಸೃಷ್ಟಿಸಿದವನು) ಎಂಬ ವಾಕ್ಯವು ತೌಹೀದಿನ ಮೊದಲ ವಿಭಾಗವಾದ ತೌಹೀದುಲ್ ಮಅ್‌ರಿಫತಿ ವಲ್ ಇಸ್ಬಾತನ್ನು ಒಳಗೊಂಡಿದೆ. ಯಾಕೆಂದರೆ ಈ ಎರಡು ವಾಕ್ಯಗಳ ಮೂಲಕ ಅಲ್ಲಾಹನ ಪ್ರಭುತ್ವವನ್ನು, ಒಡೆತನವನ್ನು, ಅವನು ಮಾತ್ರವೇ ಸೃಷ್ಟಿಕರ್ತನೆಂಬುದನ್ನು ಮತ್ತು ಅವನ ಹೊರತು ಬೇರೆ ಸೃಷ್ಟಿಕರ್ತರಿಲ್ಲ ಎಂಬ ವಿಷಯಗಳನ್ನು ಅಂಗೀಕರಿಸಲಾಗುತ್ತದೆ.

**ಲಾ ಇಲಾಹ ಇಲ್ಲಾ ಅನ್ತ** (ಆರಾಧಿಸಲ್ಪಡುವ ಹಕ್ಕು ನಿನ್ನ ಹೊರತು ಅನ್ಯರಿಗಿಲ್ಲ) ಮತ್ತು **ವಅನ ಅಬ್ದುಕ** (ಮತ್ತು ನಾನು ನಿನ್ನ ದಾಸ) ಎಂಬ ವಾಕ್ಯಗಳು ತೌಹೀದಿನ ಎರಡನೆ ವಿಭಾಗವಾದ ತೌಹೀದುಲ್ ಇರಾದತಿ ವತ್ತಲಬನ್ನು ಒಳಗೊಂಡಿದೆ. ಯಾಕೆಂದರೆ ಈ ಎರಡು ವಾಕ್ಯಗಳಲ್ಲಿ ಇಬಾದತ್‌ಗಳನ್ನು ಅಲ್ಲಾಹನಿಗೆ ಮಾತ್ರ ಸಮರ್ಪಿಸಬೇಕೆಂಬ ಅಭಿವ್ಯಕ್ತಿಯಿದೆ.

ಆದ್ದರಿಂದ ಈ ಪ್ರಾರ್ಥನೆಯು ಧರ್ಮದ ಮೂಲಭೂತ ತತ್ವವಾದ ತೌಹೀದಿನ ಎರಡು ವಿಭಾಗಗಳನ್ನೂ ಒಟ್ಟಾಗಿ ಒಳಗೊಂಡು ಆರಂಭವಾಗುತ್ತದೆ.

**ಖಲಕ್‌ತನೀ ವಅನ ಅಬ್ದುಕ** (ನೀನು ನನ್ನನ್ನು ಸೃಷ್ಟಿಸಿರುವೆ ಮತ್ತು ನಾನು ನಿನ್ನ ದಾಸ) ಎಂಬ ವಾಕ್ಯದಲ್ಲಿ ಉಲಮಾಗಳು ದೃಢೀಕರಿಸಿದ ಒಂದು ತತ್ವಕ್ಕೆ ಪುರಾವೆಯಿದೆ. ತೌಹೀದು ರುಬೂಬಿಯ್ಯಃವು ತೌಹೀದುಲ್ ಉಲೂಹಿಯ್ಯಃವನ್ನು ಅನಿವಾರ್ಯಗೊಳಿಸುತ್ತದೆ ಎಂಬುದೇ ಆ ತತ್ವ. ಅಂದರೆ ತೌಹೀದು ರುಬೂಬಿಯ್ಯಃವನ್ನು ಅಂಗೀಕರಿಸಿದ ವ್ಯಕ್ತಿಗೆ ತೌಹೀದುಲ್ ಉಲೂಹಿಯ್ಯಃವನ್ನು ಅಂಗೀಕರಿಸುವುದು ಅನಿವಾರ್ಯ. ಉಲಮಾಗಳು ದೃಢೀಕರಿಸಿದ ಈ ತತ್ವಕ್ಕೆ ಹದೀಸಿನ ಈ ವಾಕ್ಯದಲ್ಲಿ ಪುರಾವೆಯಿದೆ. ಯಾಕೆಂದರೆ ಅಲ್ಲಾಹನ ಹೊರತು ಬೇರೆ ಸೃಷ್ಟಿಕರ್ತನಿಲ್ಲ

ಎಂದು ಒಬ್ಬ ವ್ಯಕ್ತಿ ಒಪ್ಪಿಕೊಂಡರೆ, ನಂತರ ಆ ಅಲ್ಲಾಹನನ್ನು ಆರಾಧಿಸುವುದು ಅವನ ಪಾಲಿಗೆ ಕಡ್ಡಾಯವಾಗುತ್ತದೆ. ಸೃಷ್ಟಿಯಲ್ಲಿ ಅಲ್ಲಾಹನಿಗೆ ಸಹಭಾಗಿಗಳೋ, ಪಾಲುದಾರರೋ ಇಲ್ಲದಿರುವಂತೆ ಆರಾಧನೆಯಲ್ಲೂ ಅವನಿಗೆ ಸಹಭಾಗಿಗಳೋ, ಪಾಲುದಾರರೋ ಇಲ್ಲ. ಈ ಕಾರಣದಿಂದಲೇ ಹದೀಸಿನಲ್ಲಿ **ಖಲಕ್ತನೀ ವಅನ ಅಬ್ದುಕ** (ನೀನು ನನ್ನನ್ನು ಸೃಷ್ಟಿಸಿರುವೆ ಮತ್ತು ನಾನು ನಿನ್ನ ದಾಸ) ಎಂದು ಹೇಳಲಾಗಿದೆ. ಈ ವಾಕ್ಯದ ಅರ್ಥವು: ನಿನ್ನ ಹೊರತು ನನಗೆ ಬೇರೆ ಸೃಷ್ಟಿಕರ್ತನಿಲ್ಲದಿರುವಂತೆ ನಿನ್ನ ಹೊರತು ನನಗೆ ಬೇರೆ ಆರಾಧ್ಯನೂ ಇಲ್ಲ. ನನ್ನನ್ನು ಸೃಷ್ಟಿಸುವುದರಲ್ಲಿ, ನನಗೆ ಅನ್ನಾಧಾರ ಒದಗಿಸುವುದರಲ್ಲಿ, ನನ್ನನ್ನು ಜೀವಂತಗೊಳಿಸುವುದರಲ್ಲಿ, ನನ್ನನ್ನು ಮೃತಪಡಿಸುವುದರಲ್ಲಿ ನಿನಗೆ ಯಾವುದೇ ಸಹಭಾಗಿಗಳೋ, ಪಾಲುದಾರರೋ ಇಲ್ಲ. ಈ ಎಲ್ಲ ವಿಷಯಗಳಲ್ಲೂ ನೀನು ಏಕೈಕನೂ ಸರಿಸಾಟಿಯಿಲ್ಲದವನೂ ಆಗಿರುವೆ. ಆದ್ದರಿಂದ ನಾನು ನಿನ್ನನ್ನಲ್ಲದೆ ಬೇರೆ ಯಾರನ್ನೂ ಆರಾಧಿಸುವುದಿಲ್ಲ. ನಿನಗಲ್ಲದೆ ಬೇರೆ ಯಾರಿಗೂ ಶರಣಾಗುವುದಿಲ್ಲ. ನಿನ್ನ ಮುಂದೆಯೇ ಹೊರತು ಇನ್ನಾರ ಮುಂದೆಯೂ ನನ್ನ ದೈನ್ಯತೆಯನ್ನು ಪ್ರಕಟಿಸುವುದಿಲ್ಲ. ನಿನ್ನಲ್ಲಲ್ಲದೆ ಇತರ ಯಾರಲ್ಲೂ ಪ್ರಾರ್ಥಿಸುವುದಿಲ್ಲ. ನಿನ್ನೊಂದಿಗಲ್ಲದೆ ಇತರ ಯಾರೊಂದಿಗೂ ಸಹಾಯ ಬೇಡುವುದಿಲ್ಲ. ನೀನು ಏಕೈಕನು. ನನ್ನನ್ನು ಶೂನ್ಯದಿಂದ ಅಸ್ತಿತ್ವಕ್ಕೆ ತಂದವನು ನೀನೇ. ನೀನೇ ನನ್ನ ಸೃಷ್ಟಿಕರ್ತ ಮತ್ತು ನೀನೇ ನನ್ನ ಆರಾಧ್ಯ.

ಅಲ್ಲಾಹನ ಹೊರತು ಬೇರೆ ಸೃಷ್ಟಿಕರ್ತನಿಲ್ಲ, ಅಲ್ಲಾಹನ ಹೊರತು ಬೇರೆ ಅನ್ನದಾತನಿಲ್ಲ, ಅಲ್ಲಾಹನ ಹೊರತು ಬೇರೆ ಅನುಗ್ರಹದಾತನಿಲ್ಲ, ಅಲ್ಲಾಹನ ಹೊರತು ಸೃಷ್ಟಿಗಳ ಕಾರ್ಯನಿರ್ವಹಣೆ ಮಾಡುವವರು ಬೇರೆ ಯಾರೂ ಇಲ್ಲ ಎಂದು ಅಂಗೀಕರಿಸಿದ ಒಬ್ಬ ವ್ಯಕ್ತಿ, ತರುವಾಯ ಸಜ್ಜನರೆಂದು ಕರೆಯಲ್ಪಡುವ ವ್ಯಕ್ತಿಗಳ ಗೋರಿಗಳ ಬಳಿ ಹೋಗಿ ಅವರೊಂದಿಗೆ ಪ್ರಾರ್ಥಿಸುವುದಾದರೆ, ಅವರೊಂದಿಗೆ ಸಹಾಯವನ್ನು ಬೇಡುವುದಾದರೆ, ಅವನಿಗೂ ತೌಹೀದಿಗೂ ಎಲ್ಲಿಯ ಸಂಬಂಧ? ಅಲ್ಲಾಹು ಮಾತ್ರ

ಸೃಷ್ಟಿಕರ್ತನೆಂದು ಅಂಗೀಕರಿಸುವ ವ್ಯಕ್ತಿಗೆ ಅಲ್ಲಾಹನನ್ನು ಮಾತ್ರ ಆರಾಧಿಸಬೇಕಾದುದು ಕಡ್ಡಾಯವಾಗಿದೆ. ಈ ಕಾರಣದಿಂದಲೇ ಕುರ್‌ಆನ್‌ನಲ್ಲಿ ಈ ವಿಷಯವನ್ನು ಪದೇ ಪದೇ ಹೇಳಲಾಗಿದೆ. ಅಂದರೆ ಕುರ್‌ಆನ್‌ನಲ್ಲಿ ಅನೇಕ ಕಡೆ ತೌಹೀದುಲ್ ಉಲೂಹಿಯ್ಯಃಕ್ಕೆ ಪುರಾವೆಯಾಗಿ ತೌಹೀದು ರ್‍ರುಬೂಬಿಯ್ಯಃವನ್ನು ಪ್ರಸ್ತಾಪಿಸಲಾಗಿದೆ. ಅಂದರೆ ಅಲ್ಲಾಹನನ್ನು ಮಾತ್ರ ಆರಾಧಿಸಬೇಕು ಎಂಬುದಕ್ಕೆ ಪುರಾವೆಯಾಗಿ ಅಲ್ಲಾಹು ಮಾತ್ರ ರಬ್ಬ್, ಸೃಷ್ಟಿಕರ್ತ, ಅನ್ನದಾತ, ಜೀವ ನೀಡುವವ, ಮರಣ ನೀಡುವವ ಎಂದು ಹೇಳಲಾಗಿದೆ.

﴿ وَأَنَا۠ رَبُّكُمۡ فَٱعۡبُدُونِ ٩٢ ﴾ [الأنبياء: 92].

**"ಮತ್ತು ನಾನು ನಿಮ್ಮ ರಬ್ಬ್. ಆದ್ದರಿಂದ ನೀವು ನನ್ನನ್ನು ಆರಾಧಿಸಿರಿ."** [ಕುರ್‌ಆನ್ 21:92]

ಅಂದರೆ ನಿಮಗೆ ನನ್ನ ಹೊರತು ಬೇರೆ ರಬ್ಬ್ ಇಲ್ಲದಿರುವಂತೆ ನನ್ನ ಹೊರತು ಬೇರೆ ಆರಾಧ್ಯನೂ ಇಲ್ಲ.

﴿ يَٰٓأَيُّهَا ٱلنَّاسُ ٱعۡبُدُواْ رَبَّكُمُ ٱلَّذِي خَلَقَكُمۡ وَٱلَّذِينَ مِن قَبۡلِكُمۡ لَعَلَّكُمۡ تَتَّقُونَ ٢١ ٱلَّذِي جَعَلَ لَكُمُ ٱلۡأَرۡضَ فِرَٰشٗا وَٱلسَّمَآءَ بِنَآءٗ وَأَنزَلَ مِنَ ٱلسَّمَآءِ مَآءٗ فَأَخۡرَجَ بِهِۦ مِنَ ٱلثَّمَرَٰتِ رِزۡقٗا لَّكُمۡۖ فَلَا تَجۡعَلُواْ لِلَّهِ أَندَادٗا وَأَنتُمۡ تَعۡلَمُونَ ٢٢ ﴾ [البقرة: 21-22].

**"ಓ ಜನರೇ, ನೀವು ನಿಮ್ಮನ್ನು ಸೃಷ್ಟಿಸಿದ ಮತ್ತು ನಿಮಗಿಂತ ಮುಂಚಿನವರನ್ನು ಸೃಷ್ಟಿಸಿದ ನಿಮ್ಮ ರಬ್ಬನ್ನು ಆರಾಧಿಸಿರಿ. ನೀವು ಭಯಭಕ್ತಿಯುಳ್ಳವರಾಗುವ ಸಲುವಾಗಿ. ಆ ರಬ್ಬ್ ಯಾರೆಂದರೆ ನಿಮಗೆ**

**ಭೂಮಿಯನ್ನು ಒಂದು ಹಾಸನ್ನಾಗಿ ಮಾಡಿಕೊಟ್ಟವನು, ಆಕಾಶವನ್ನು ಒಂದು ಛಾವಣಿಯನ್ನಾಗಿ ಮಾಡಿಕೊಟ್ಟವನು ಮತ್ತು ಆಕಾಶದಿಂದ ಮಳೆಯನ್ನು ಸುರಿಸಿ, ಅದರ ಮೂಲಕ ವಿಭಿನ್ನ ಫಲವರ್ಗಗಳಿಂದ ನಿಮಗೆ ಅನ್ನಾಧಾರಗಳನ್ನು ಉತ್ಪಾದಿಸಿಕೊಟ್ಟವನು. ಆದ್ದರಿಂದ ನೀವು ಅರಿತವರಾಗಿದ್ದೂ ಸಹ ಅಲ್ಲಾಹನೊಂದಿಗೆ ಇತರರನ್ನು ಪ್ರತಿಸ್ಪರ್ಧಿಗಳನ್ನಾಗಿ ಮಾಡಬೇಡಿ."** [ಕುರ್‌ಆನ್ 2:21–22]

**"ಆದ್ದರಿಂದ ನೀವು ಅರಿತವರಾಗಿದ್ದೂ ಸಹ ಅಲ್ಲಾಹನೊಂದಿಗೆ ಇತರರನ್ನು ಪ್ರತಿಸ್ಪರ್ಧಿಗಳನ್ನಾಗಿ ಮಾಡಬೇಡಿ"** ಎಂಬ ಭಾಗವು ಅಲ್ಲಾಹನೊಂದಿಗೆ ಇತರರನ್ನು ಪ್ರತಿಸ್ಪರ್ಧಿಗಳನ್ನಾಗಿ ಮತ್ತು ಸಹಭಾಗಿ ಗಳನ್ನಾಗಿ ಮಾಡಿಕೊಂಡವರಿಗಿರುವ ಅಭಿಸಂಬೋಧನೆಯಾಗಿದೆ. ಇಬ್ನ್ ಅಬ್ಬಾಸ್(ﷺ) ಮತ್ತಿತರರು ಹೇಳುತ್ತಾರೆ:

لَا تَجْعَلُوا لِلَّهِ شُرَكَاءَ فِي الْعِبَادَةِ وَأَنْتُمْ تَعْلَمُونَ أَنَّهُ لَا خَالِقَ لَكُمْ غَيْرَ اللَّهِ

**"ಅಲ್ಲಾಹನ ಹೊರತು ನಿಮಗೆ ಬೇರೆ ಸೃಷ್ಟಿಕರ್ತನಿಲ್ಲ ಎಂಬುದನ್ನು ಅರಿತವರಾಗಿದ್ದೂ ಸಹ ನೀವು ಆರಾಧನೆಯ ವಿಷಯದಲ್ಲಿ ಅಲ್ಲಾಹನೊಂದಿಗೆ ಸಹಭಾಗಿಗಳನ್ನು ಮಾಡಿಕೊಳ್ಳಬಾರದು."** (17)

ಈ ಕಾರಣದಿಂದಲೇ ಸೃಷ್ಟಿಕರ್ತನೂ, ಅನ್ನದಾತನೂ, ಉಪಕಾರ ಉಪದ್ರವಗಳನ್ನು ಮಾಡುವವನೂ, ಅನುಗ್ರಹ ನೀಡುವವನೂ, ಸೃಷ್ಟಿಗಳ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವವನೂ ಆಗಿರುವ ಅಲ್ಲಾಹನನ್ನು ಬಿಟ್ಟು

[17] ಅತ್ತಬರೀ ತಮ್ಮ 'ತಫ್ಸೀರ್'ನಲ್ಲಿ (486) ಮತ್ತು ಇಬ್ನ್ ಅಬೀ ಹಾತಿಮ್ ತಮ್ಮ 'ತಫ್ಸೀರ್'ನಲ್ಲಿ (229) ಇದನ್ನು ಉದ್ಧರಿಸಿದ್ದಾರೆ.

ಅಲ್ಲಾಹೇತರರೊಂದಿಗೆ ಪ್ರಾರ್ಥಿಸುವ, ಅಲ್ಲಾಹೇತರರೊಂದಿಗೆ ಸಹಾಯ ಯಾಚನೆ ಮಾಡುವ, ತಮಗೆ ಉಪಕಾರವಾಗಲಿ, ಉಪದ್ರವವಾಗಲಿ ಮಾಡದ ಅಲ್ಲಾಹೇತರರಲ್ಲಿ ಆಶ್ರಯವನ್ನು ಬೇಡುವ ಜನರನ್ನು ಅತಿಕಠಿಣವಾದ ಶೈಲಿಯಲ್ಲಿ ಕುರ್‌ಆನ್ ಆಕ್ಷೇಪಿಸಿದೆ.

ದುರದೃಷ್ಟವಶಾತ್, ಇಂದು ಕೆಲವು ಜನರಿದ್ದಾರೆ. ಅವರು ತಮ್ಮನ್ನು ಇಸ್ಲಾಮ್ ಧರ್ಮದವರೆಂದು ಹೇಳುತ್ತಾರೆ. ಅಲ್ಲಾಹನ ಹೊರತು ಬೇರೆ ಸೃಷ್ಟಿಕರ್ತನಿಲ್ಲ ಎಂಬುದನ್ನು ಅವರು ಅಂಗೀಕರಿಸುತ್ತಾರೆ. ಮಾತ್ರವಲ್ಲ ಅವರು 'ಲಾ ಇಲಾಹ ಇಲ್ಲಲ್ಲಾಹ್' (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂದು ಹೇಳುತ್ತಾರೆ. ಹೀಗಿದ್ದೂ ಸಹ ಅವರು ಗೋರಿಗಳ ಬಳಿಗೆ ಮತ್ತು ದರ್ಗಾಗಳಿಗೆ ಹೋಗುತ್ತಾರೆ. ಅಲ್‌ಬದವೀ, ಝೈನಬ್, ನಫೀಸಃ ಮೊದಲಾದವರ ಗೋರಿಗಳ ಬಳಿಗೆ ತೆರಳುತ್ತಾರೆ. ಅಲ್ಲಿ ಗೋರಿಯಲ್ಲಿರುವವರಿಗೆ ಬಲಿ ನೀಡುತ್ತಾರೆ, ಅವರಿಗೆ ಹರಕೆ ಹೊರುತ್ತಾರೆ, ಅವರೊಂದಿಗೆ ಸಹಾಯ ಬೇಡುತ್ತಾರೆ, ಅವರೊಂದಿಗೆ ಪ್ರಾರ್ಥಿಸುತ್ತಾರೆ, ಅವರೊಂದಿಗೆ ಬೇಡಿಕೆಯಿಡುತ್ತಾರೆ, ಅವರ ಮುಂದೆ ಸಂಪೂರ್ಣ ಮುರಿದು ಬಿದ್ದು ದೈನ್ಯತೆಯೊಂದಿಗೆ ಪ್ರಾರ್ಥಿಸುತ್ತಾರೆ. ಯಾವುದೇ ಹಾನಿಯಾಗಲಿ ಲಾಭವನ್ನಾಗಲಿ ಮಾಡದ ಆ ಗೋರಿಗಳಿಗೆ ಇವರು ಈ ಎಲ್ಲ ಇಬಾದತ್‌ಗಳನ್ನೂ ಅರ್ಪಿಸುತ್ತಾರೆ.

﴿ قُلِ ٱدۡعُواْ ٱلَّذِينَ زَعَمۡتُم مِّن دُونِهِۦ فَلَا يَمۡلِكُونَ كَشۡفَ ٱلضُّرِّ عَنكُمۡ وَلَا تَحۡوِيلًا ٥٦ ﴾ [الإسراء: 56].

**"(ಓ ಪ್ರವಾದಿಯವರೇ! ಅಲ್ಲಾಹು ಅಲ್ಲದವರನ್ನು ಕರೆದು ಪ್ರಾರ್ಥಿಸುವವರೊಂದಿಗೆ) ಹೇಳಿರಿ: ನೀವು ಅಲ್ಲಾಹನ ಹೊರತಾದ ಆರಾಧ್ಯರೆಂದು ವಾದಿಸುತ್ತಿರುವವರನ್ನು ಕರೆದು ಪ್ರಾರ್ಥಿಸಿರಿ. ನಿಮ್ಮಿಂದ**

**ಯಾವುದೇ ಹಾನಿಯನ್ನು ನಿವಾರಿಸುವ ಶಕ್ತಿ ಅವರಿಗಿಲ್ಲ. ಅದನ್ನು ಇನ್ನೊಬ್ಬರಿಗೆ ವರ್ಗಾಯಿಸಿಬಿಡುವ ಶಕ್ತಿಯೂ ಅವರಿಗಿಲ್ಲ."** [ಕುರ್‌ಆನ್ 17:56]

﴿ قُلِ ٱدۡعُواْ ٱلَّذِينَ زَعَمۡتُم مِّن دُونِ ٱللَّهِ لَا يَمۡلِكُونَ مِثۡقَالَ ذَرَّةٖ فِي ٱلسَّمَٰوَٰتِ وَلَا فِي ٱلۡأَرۡضِ وَمَا لَهُمۡ فِيهِمَا مِن شِرۡكٖ وَمَا لَهُۥ مِنۡهُم مِّن ظَهِيرٖ ٢٢ وَلَا تَنفَعُ ٱلشَّفَٰعَةُ عِندَهُۥٓ إِلَّا لِمَنۡ أَذِنَ لَهُۥ ﴾ [سبأ: 22-23].

**"(ಓ ಪ್ರವಾದಿಯವರೇ! ಅಲ್ಲಾಹು ಅಲ್ಲದವರನ್ನು ಕರೆದು ಪ್ರಾರ್ಥಿಸುವವರೊಂದಿಗೆ) ಹೇಳಿರಿ: ನೀವು ಅಲ್ಲಾಹನ ಹೊರತಾದ ಆರಾಧ್ಯರೆಂದು ವಾದಿಸುತ್ತಿರುವವರನ್ನು ಕರೆದು ಪ್ರಾರ್ಥಿಸಿರಿ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅಥವಾ ಅವೆರಡರ ನಡುವಿನಲ್ಲಾಗಲಿ ಇರುವ ಯಾವುದೂ ಅವರ ಅಧೀನದಲ್ಲೋ, ನಿಯಂತ್ರಣದಲ್ಲೋ ಇಲ್ಲ. ಅವುಗಳ ಒಂದು ಪಾಲು ಕೂಡ ಅವರ ಅಧೀನದಲ್ಲೋ, ನಿಯಂತ್ರಣದಲ್ಲೋ ಇಲ್ಲ. ಅವರ ಪೈಕಿ ಅಲ್ಲಾಹನಿಗೆ ಸಹಾಯಕರಾಗಿ ಯಾರೂ ಇಲ್ಲ. ಅಲ್ಲಾಹು ಯಾರಿಗೆ ಶಿಫಾರಸು ಮಾಡುವ ಅಧಿಕಾರ ನೀಡುತ್ತಾನೋ, ಅವರ ಹೊರತು ಇತರ ಯಾರೇ ಮಾಡುವ ಶಿಫಾರಸು ಅಲ್ಲಾಹನ ಬಳಿ ಯಾವುದೇ ಪ್ರಯೋಜನವನ್ನೂ ನೀಡುವುದಿಲ್ಲ."** [ಕುರ್‌ಆನ್ 34:22–23]

ಪ್ರಾರ್ಥಿಸಬೇಕಾದುದು, ಬೇಡಿಕೆಯಿಡಬೇಕಾದುದು, ಸಹಾಯ ಯಾಚನೆ ಮಾಡಬೇಕಾದುದು, ತವಕ್ಕುಲ್ ಮಾಡಬೇಕಾದುದು, ಆರಾಧಿಸಬೇಕಾದುದು ಸೃಷ್ಟಿಕರ್ತನಾಗಿರುವ ಅಲ್ಲಾಹನನ್ನು ಮಾತ್ರವೆಂಬುದನ್ನು ಈ ಜನರು ಮರೆತುಬಿಟ್ಟಿದ್ದಾರೆ ಅಥವಾ ಅದರ ಬಗ್ಗೆ ಅರಿವಿಲ್ಲದವರಾಗಿದ್ದಾರೆ. ಆದ್ದರಿಂದ ಅಲ್ಲಾಹನನ್ನು ಸೃಷ್ಟಿಕರ್ತನೆಂದು ಅಂಗೀಕರಿಸಿದ ವ್ಯಕ್ತಿ ಅಲ್ಲಾಹನನ್ನು ಮಾತ್ರ ಆರಾಧಿಸಬೇಕಾದುದು ಕಡ್ಡಾಯವಾಗಿದೆಯೆಂಬ

ಅಮೂಲ್ಯವೂ, ಮಹತ್ವಪೂರ್ಣವೂ ಆಗಿರುವ ತತ್ವದೆಡೆಗೆ ಈ ಪ್ರಾರ್ಥನೆಯು ಆರಂಭದಲ್ಲೇ ಮಾರ್ಗದರ್ಶನ ನೀಡುತ್ತದೆ.

**ಲಾ ಇಲಾಹ ಇಲ್ಲಾ ಅನ್ತ** (ಆರಾಧಿಸಲ್ಪಡುವ ಹಕ್ಕು ನಿನ್ನ ಹೊರತು ಅನ್ಯರಿಗಿಲ್ಲ). ಈ ವಾಕ್ಯದಲ್ಲಿ ಅಲ್ಲಾಹನ ಉಲೂಹಿಯ್ಯತ್ತಿನ (ಆರಾಧಿಸಲ್ಪಡುವ ಹಕ್ಕು) ಅಂಗೀಕಾರ ಮತ್ತು ದೃಢೀಕರಣವಿದೆ. ಈ ಹದೀಸಿನ ಆರಂಭದಲ್ಲೇ ಬಂದಿರುವ **ಲಾ ಇಲಾಹ ಇಲ್ಲಲ್ಲಾಹ್** (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂಬ ಮಹಾ ವಚನಕ್ಕಾಗಿ ಸೃಷ್ಟಿಗಳನ್ನು ಸೃಷ್ಟಿಸಲಾಗಿದೆ. ಆಕಾಶಗಳು ಮತ್ತು ಭೂಮಿ ಅಸ್ತಿತ್ವದಲ್ಲಿರುವುದು ಈ ವಚನದಿಂದಾಗಿದೆ. ಸ್ವರ್ಗ ಮತ್ತು ನರಕವನ್ನು ಸೃಷ್ಟಿಸಲಾಗಿರುವುದು ಈ ವಚನಕ್ಕಾಗಿದೆ. ಈ ವಚನದ ಕಾರಣದಿಂದಲೇ ಜನರನ್ನು ಸೌಭಾಗ್ಯವಂತರು ಮತ್ತು ದೌರ್ಭಾಗ್ಯ ವಂತರು ಎಂದು ಎರಡಾಗಿ ವಿಂಗಡಿಸಲಾಗಿದೆ. ಅಂದರೆ ಸ್ವರ್ಗದ ಜನರು ಮತ್ತು ನರಕದ ಜನರು. ಈ ವಚನವನ್ನು ಅಂಗೀಕರಿಸಿದ ಜನರು ಸ್ವರ್ಗದ ಜನರು ಮತ್ತು ಈ ವಚನವನ್ನು ತಿರಸ್ಕರಿಸಿದ ಜನರು ನರಕದ ಜನರು. ಇಂತಹ ಅನೇಕ ಮಹತ್ವಗಳನ್ನು ಹೊಂದಿರುವ **ಲಾ ಇಲಾಹ ಇಲ್ಲಲ್ಲಾಹ್** (ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಅನ್ಯರಿಗಿಲ್ಲ) ಎಂಬ ಮಹಾ ವಚನವು ಈ ಹದೀಸಿನ ಆರಂಭದಲ್ಲೇ ಬಂದಿದೆ.

ಉಲಮಾಗಳು ಹೇಳುವ ಪ್ರಕಾರ **ಲಾ ಇಲಾಹ ಇಲ್ಲಲ್ಲಾಹ್** ಎಂಬ ವಚನವನ್ನು ಕೇವಲ ಬಾಯಿ ಮೂಲಕ ಉಚ್ಛರಿಸುವ ಜನರಿಗೆ ಅದು ಯಾವುದೇ ಪ್ರಯೋಜನವನ್ನೂ ನೀಡುವುದಿಲ್ಲ. ಬದಲಾಗಿ ಅದನ್ನು ಉಚ್ಛರಿಸುವಾಗ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಬಂದಿರುವ ಅದರ ಶರತ್ತುಗಳನ್ನು ಪಾಲಿಸಬೇಕಾದುದು ಕಡ್ಡಾಯವಾಗಿದೆ. **ಲಾ ಇಲಾಹ ಇಲ್ಲಲ್ಲಾಹ್** ಎಂಬ ವಚನಕ್ಕೆ ಏಳು ಶರತ್ತುಗಳಿವೆ. ಆ ಶರತ್ತುಗಳನ್ನು ಪದ್ಯರೂಪದಲ್ಲಿ ಹೀಗೆ ಹೊಸೆಯಲಾಗಿದೆ:

وَبِشُـرُوطٍ سَبْعَةٍ قَدْ قُيِّـدَتْ... وَفِي نُصُوصِ الْوَحْيِ حَقًّا وَرَدَتْ

فَـإِنَّهُ لَا يَنْتَفِعُ قَـائِلُهَـا ... بِالنُّطْـقِ حَتَّـى يَسْتَـكْـمِلَهَـا

الْعِـلْمُ وَالْيَقِيــنُ وَالْقَبُـولُ ... وَالاِنْقِيَـادُ فَـادْرِ مَـا أَقُـولُ

الصِّدْقُ وَالْإِخْلَاصُ وَالْمَحَبَّةْ ... وَفَّقَكَ اللَّهُ لِمَـا أَحَـبَّهْ

**"ಅದು (ಲಾ ಇಲಾಹ ಇಲ್ಲಲ್ಲಾಹ್) ಏಳು ಶರತ್ತುಗಳೊಂದಿಗೆ ಬಂಧಿತವಾಗಿದೆ. ಈ ಏಳು ಶರತ್ತುಗಳು ವಹ್ಯ್‌ನ ಮೂಲಕವೇ ಬಂದದ್ದಾಗಿವೆ. ಈ ಏಳು ಶರತ್ತುಗಳನ್ನು ಪೂರ್ಣಗೊಳಿಸದ ವ್ಯಕ್ತಿ ಈ ವಚನವನ್ನು ಉಚ್ಛರಿಸಿದರೆ ಅದರಿಂದ ಅವನಿಗೆ ಯಾವುದೇ ಪ್ರಯೋಜನವೂ ಇಲ್ಲ. ಆ ಏಳು ಶರತ್ತುಗಳು: ಜ್ಞಾನ, ದೃಢವಿಶ್ವಾಸ, ಸ್ವೀಕಾರ, ಶರಣಾಗತಿ, ಸತ್ಯಸಂಧತೆ, ನಿಷ್ಕಳಂಕತೆ ಮತ್ತು ಪ್ರೀತಿ. ಅಲ್ಲಾಹು ತಾನು ಇಷ್ಟಪಟ್ಟದ್ದರ ಕಡೆಗೆ ನಿನಗೆ ತೌಫೀಕ್ ನೀಡಲಿ."**

ಕವಿ ಈ ಪದ್ಯದಲ್ಲಿ **ಲಾಇಲಾಹ ಇಲ್ಲಲ್ಲಾಹ್** ಎಂಬ ಮಹಾ ವಚನಕ್ಕಿರುವ ಏಳು ಶರತ್ತುಗಳನ್ನು ಹೇಳಿದ್ದಾರೆ. ಈ ಏಳು ಶರತ್ತುಗಳಿಗೂ ಅಲ್ಲಾಹನ ಗ್ರಂಥ ಮತ್ತು ಅವನ ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ಸ್ಪಷ್ಟ ಪುರಾವೆಗಳಿವೆ. ಇದು ಆ ಪುರಾವೆಗಳನ್ನು ವಿವರಿಸಬೇಕಾದ ಸ್ಥಳವಲ್ಲದ್ದರಿಂದ ಅದನ್ನು ಬಿಟ್ಟುಬಿಡುತ್ತಿದ್ದೇನೆ. (18)

[18] ಈ ಏಳು ಶರತ್ತುಗಳು ಮತ್ತು ಅದರ ಪುರಾವೆಗಳನ್ನು ಅರಿಯಲು 'ಮಆರಿಜುಲ್ ಕಬೂಲ್' ಎಂಬ ಗ್ರಂಥವನ್ನು ನೋಡಿರಿ.

**ವಅನ ಅಬ್ದುಕ** (ಮತ್ತು ನಾನು ನಿನ್ನ ದಾಸ). ಇಲ್ಲಿ ತಾನು ಅಲ್ಲಾಹನ ದಾಸ ಎಂಬುದನ್ನು ಒಪ್ಪಿಕೊಳ್ಳಲಾಗುತ್ತದೆ. ಸೃಷ್ಟಿಗಳೆಲ್ಲರೂ ಅಲ್ಲಾಹನ ದಾಸರು. ಸೃಷ್ಟಿಗಳೆಲ್ಲರೂ ಎರಡು ವಿಧಗಳಲ್ಲಿ ಅಲ್ಲಾಹನ ದಾಸರಾಗಿದ್ದಾರೆ:

**1. ಅಲ್ಲಾಹನ ರುಬೂಬಿಯ್ಯತ್ತಿನ ದಾಸ್ಯತ್ವ.**

**2. ಅಲ್ಲಾಹನ ಉಲೂಹಿಯ್ಯತ್ತಿನ ದಾಸ್ಯತ್ವ.**

**ಅಲ್ಲಾಹನ ರುಬೂಬಿಯ್ಯತ್ತಿನ ದಾಸ್ಯತ್ವ** ಎಂಬುದು ನೈಸರ್ಗಿಕವಾಗಿರುವ ದಾಸ್ಯತ್ವ. ಸೃಷ್ಟಿಗಳೆಲ್ಲರನ್ನೂ ಸೃಷ್ಟಿಸಿ ಅಸ್ತಿತ್ವಕ್ಕೆ ತಂದವನು, ಅವರಿಗೆ ಅನ್ನಾಧಾರ ಒದಗಿಸುವವನು, ಅವರನ್ನು ಜೀವಗೊಳಿಸುವವನು ಮತ್ತು ಮರಣಗೊಳಿಸುವವನು ಎಲ್ಲವೂ ಅಲ್ಲಾಹು ಮಾತ್ರವಾಗಿರುವುದರಿಂದ, ಮತ್ತು ಇದರಲ್ಲಿ ಅವನಿಗೆ ಯಾವುದೇ ಸಹಭಾಗಿಗಳೋ, ಪಾಲುದಾರರೋ ಇಲ್ಲದಿರುವುದರಿಂದ, ಸೃಷ್ಟಿಗಳೆಲ್ಲರೂ ಅವನ ದಾಸರು. ಅದನ್ನು ಅವರು ಒಪ್ಪಿಕೊಂಡರೂ ಬಿಟ್ಟರೂ ಅವರೆಲ್ಲರೂ ಅಲ್ಲಾಹನ ದಾಸರು.

﴿إِن كُلُّ مَن فِي ٱلسَّمَٰوَٰتِ وَٱلۡأَرۡضِ إِلَّآ ءَاتِي ٱلرَّحۡمَٰنِ عَبۡدٗا ٩٣﴾

[مريم: ٩٣].

**“ಆಕಾಶಗಳಲ್ಲಿರುವವರು (ಮಲಕ್‌ಗಳು) ಮತ್ತು ಭೂಮಿಯಲ್ಲಿರು ವವರು (ಮನುಷ್ಯರು ಮತ್ತು ಜಿನ್ನ್‌ಗಳು) ಪರಮ ದಯಾಮಯನ ಬಳಿಗೆ (ಪುನರುತ್ಥಾನ ದಿನದಂದು) ದಾಸರಾಗಿಯೇ ಹೊರತು ಬರಲಾರರು.”** [ಕುರ್‌ಆನ್ 19:93]

ಈ ದಾಸ್ಯತ್ವದಲ್ಲಿ ಎಲ್ಲರೂ ಒಳಗೊಳ್ಳುತ್ತಾರೆ. ಎಲ್ಲ ಸೃಷ್ಟಿಗಳೂ ಅಲ್ಲಾಹನ ದಾಸರಾಗಿರುವುದರಿಂದ ಅವರೆಲ್ಲರೂ ಅಲ್ಲಾಹನ ರುಬೂಬಿಯ್ಯತ್ತಿನ ದಾಸ್ಯತ್ವದಲ್ಲಿ ಒಳಗೊಳ್ಳುತ್ತಾರೆ. ಯಾಕೆಂದರೆ ಅವರನ್ನು

ಸೃಷ್ಟಿಸಿ ಅಸ್ತಿತ್ವಕ್ಕೆ ತಂದವನು, ಅವರಿಗೆ ಅನ್ನಾಧಾರ ನೀಡುವವನು, ಅವರಿಗೆ ಜೀವ ಮತ್ತು ಮರಣವನ್ನು ನೀಡುವವನು ಎಲ್ಲವೂ ಅಲ್ಲಾಹು ಮಾತ್ರ.

**ಅಲ್ಲಾಹನ ಉಲೂಹಿಯ್ಯತ್ತಿನ ದಾಸ್ಯತ್ವ** ಎಂಬುದು ವಿಶೇಷವಾಗಿರುವ ದಾಸ್ಯತ್ವ. ಇದರಲ್ಲಿ ಎಲ್ಲ ಸೃಷ್ಟಿಗಳೂ ಒಳಪಡುವುದಿಲ್ಲ. ಬದಲಾಗಿ ಅಲ್ಲಾಹು ತನ್ನ ಸೃಷ್ಟಿಗಳ ಪೈಕಿ ಯಾರಿಗೆ ಈಮಾನ್ ದಯಪಾಲಿಸಿ ತನ್ನ ಆಜ್ಞಾಪಾಲನೆ ಮಾಡುವುದರ ಕಡೆಗೆ ಮಾರ್ಗದರ್ಶನ (ಹಿದಾಯತ್) ನೀಡಿದ್ದಾನೋ ಅವರು ಮಾತ್ರ ಇದರಲ್ಲಿ ಒಳಪಡುತ್ತಾರೆ. ಆದ್ದರಿಂದ ಅಲ್ಲಾಹನ ಉಲೂಹಿಯ್ಯತ್ತಿನ ದಾಸರು ಎಂದರೆ ಅಲ್ಲಾಹನಿಗೆ ಸಂಪೂರ್ಣ ಶರಣಾಗಿ ಅವನ ಆಜ್ಞಾಪಾಲನೆ ಮಾಡುತ್ತಾ ಬದುಕುವವರು. ಅವನನ್ನು ಮಾತ್ರ ಆರಾಧಿಸುವವರು. ಅವನ ಶರೀಅತ್ತನ್ನು ಅನುಸರಿಸುವವರು. ಅವನ ರಸೂಲರನ್ನು ಅನುಸರಿಸುವವರು. ಈ ದಾಸ್ಯತ್ವವನ್ನು ಉಲೂಹಿಯ್ಯತ್ತಿನ ದಾಸ್ಯತ್ವ ಎಂದು ಕರೆಯಲಾಗುತ್ತದೆ. ಇದು ಅಲ್ಲಾಹನ ಕೆಲವು ಸೃಷ್ಟಿಗಳಿಗೆ ಮಾತ್ರ ವಿಶೇಷವಾಗಿರುವ ದಾಸ್ಯತ್ವ. ಅಂದರೆ ಪ್ರವಾದಿಗಳಿಗೆ ಮತ್ತು ಅವರನ್ನು ಅನುಸರಿಸಿದವರಿಗೆ. ಈ ಕಾರಣದಿಂದಲೇ ಅಲ್ಲಾಹು ಇವರನ್ನು ತನ್ನ ಹೆಸರಿಗೆ ಸೇರಿಸಿ **ಇಬಾದು ರ್ರಹ್ಮಾನ್** (ಪರಮ ದಯಾಮಯನಾದ ಅಲ್ಲಾಹನ ದಾಸರು) [ಕುರ್‌ಆನ್ 25:63] ಎಂದು ಕರೆಯುವ ಮೂಲಕ ವಿಶೇಷ ಮಹತ್ವವನ್ನು ನೀಡಿದ್ದಾನೆ.

**ವಅನ ಅಬ್ದುಕ** (ಮತ್ತು ನಾನು ನಿನ್ನ ದಾಸ) ಎಂಬ ವಾಕ್ಯದ ಉದ್ದೇಶವು ಅಲ್ಲಾಹನ ಉಲೂಹಿಯ್ಯತ್ತಿನ ದಾಸ್ಯತ್ವವಾಗಿದೆ. ಯಾಕೆಂದರೆ **ಖಲಕ್‌ತನೀ** (ನೀನು ನನ್ನನ್ನು ಸೃಷ್ಟಿಸಿರುವೆ) ಎಂಬ ವಾಕ್ಯದಲ್ಲಿ, ಮತ್ತು **ಅನ್ತ ರಬ್ಬೀ** (ನೀನು ನನ್ನ ರಬ್ಬ್) ಎಂಬ ವಾಕ್ಯದಲ್ಲಿ ಅಲ್ಲಾಹನ ರುಬೂಬಿಯ್ಯತ್ತಿನ ದಾಸ್ಯತ್ವವನ್ನು ಸೂಚಿಸಲಾಗಿದೆ.

**ವಅನ ಅಬ್ದುಕ** (ಮತ್ತು ನಾನು ನಿನ್ನ ದಾಸ) ಎಂಬ ವಾಕ್ಯದ ಅರ್ಥ: ನಾನು ನಿನ್ನ ಆರಾಧಕ, ನಿನ್ನ ಆಜ್ಞಾಪಾಲಕ, ನಿನ್ನ ಆಜ್ಞೆಗಳನ್ನು ಅನುಸರಿಸುವವನು ಮತ್ತು ನಿನ್ನ ಶರೀಅತ್ತಿಗೆ ಶರಣಾದವನು.

## ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು

{وَأَنَا عَلَى عَهْدِكَ وَوَعْدِكَ مَااسْتَطَعْتُ}

**ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು** (ಮತ್ತು ನಾನು ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿರುವೆ). ಉಲಮಾಗಳು ಈ ವಾಕ್ಯಕ್ಕೆ ಭಿನ್ನ ಅರ್ಥಗಳನ್ನು ನೀಡಿದ್ದಾರೆ. ಕೆಲವರು ಹೇಳುವ ಪ್ರಕಾರ **ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು** (ಮತ್ತು ನಾನು ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿರುವೆ) ಎಂದರೆ ನಾನು ಈಮಾನಿನಲ್ಲಿ, ಇಬಾದತ್ತಿನಲ್ಲಿ ಮತ್ತು ನಿನ್ನ ಆಜ್ಞೆಗಳಿಗೆ ಶರಣಾಗುವುದರಲ್ಲಿ ಅಚಲವಾಗಿ ಮತ್ತು ದೃಢವಾಗಿ ನಿಲ್ಲುವೆನು ಎಂದು ನಾನು ನಿನ್ನೊಂದಿಗೆ ಕರಾರು ಮಾಡಿಕೊಂಡಿದ್ದೇನೆ ಮತ್ತು ನಿನಗೆ ವಾಗ್ದಾನ ನೀಡಿದ್ದೇನೆ. ಆ ಕರಾರು ಮತ್ತು ವಾಗ್ದಾನವನ್ನು ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಾನು ಪಾಲಿಸುತ್ತಿರುವೆನು. ಸಾಧ್ಯವಾಗುವಷ್ಟರ ಮಟ್ಟಿಗೆ ಪಾಲಿಸುವುದೇಕೆಂದರೆ ಒಬ್ಬ ವ್ಯಕ್ತಿಗೆ ಮಾಡಲು ಸಾಧ್ಯವಿಲ್ಲದ್ದನ್ನು ಮಾಡುವಂತೆ ಅಲ್ಲಾಹು ಅವನನ್ನು ಬಲವಂತಪಡಿಸುವುದಿಲ್ಲ ಎಂಬ ಕಾರಣದಿಂದ.

ಆದ್ದರಿಂದ **ವಅನ ಅಬ್ದುಕ** (ಮತ್ತು ನಾನು ನಿನ್ನ ದಾಸ) ಎಂದು ಹೇಳಿದ ವ್ಯಕ್ತಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸಿದವನು ಮತ್ತು ಅಲ್ಲಾಹನಿಗೆ ಶರಣಾದವನು. ಈಮಾನಿನಲ್ಲಿ ಅಚಲವಾಗಿ ನಿಲ್ಲುವೆನು ಮತ್ತು ಅಲ್ಲಾಹನ ಆಜ್ಞೆಗಳನ್ನು ಸದಾ ಪಾಲಿಸುವೆನು ಎಂದು ಕರಾರು ಮತ್ತು ವಾಗ್ದಾನ ಮಾಡಿದವನು. ಅವನು ತನ್ನ ಪ್ರತಿಯೊಂದು ನಮಾಝಿನಲ್ಲೂ, ಮಾತ್ರವಲ್ಲ, ಪ್ರತಿಯೊಂದು ರಕ್ಅತ್ತಿನಲ್ಲೂ ಈ ಕೆಳಗಿನಂತೆ ಕರಾರು ಮಾಡುತ್ತಾನೆ:

﴿إِيَّاكَ نَعۡبُدُ وَإِيَّاكَ نَسۡتَعِينُ ۝٥﴾ [الفاتحة: 5].

**“ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನೊಂದಿಗೆ ಮಾತ್ರ ಸಹಾಯ ಬೇಡುತ್ತೇವೆ.”** [ಕುರ್‌ಆನ್ 1:5]

ನಾನು ಅಲ್ಲಾಹನನ್ನು ಮಾತ್ರ ಆರಾಧಿಸುವೆನು, ಅವನ ಹೊರತು ಇತರ ಯಾರನ್ನೂ ನಾನು ಆರಾಧಿಸುವುದಿಲ್ಲ, ಮತ್ತು ನಾನು ಅಲ್ಲಾಹನೊಂದಿಗೆ ಮಾತ್ರ ಸಹಾಯ ಬೇಡುವೆನು, ಅವನ ಹೊರತು ಇತರ ಯಾರಲ್ಲೂ ನಾನು ಸಹಾಯ ಬೇಡುವುದಿಲ್ಲ ಎಂಬುದು ನೀವು ನಿಮ್ಮ ನಮಾಝಿನ ಪ್ರತಿ ರಕ್ಅತ್ತಿನಲ್ಲೂ ಅಲ್ಲಾಹನೊಂದಿಗೆ ಮಾಡಿಕೊಳ್ಳುತ್ತಿರುವ ಕರಾರು ಮತ್ತು ವಾಗ್ದಾನವಾಗಿದೆ.

ಇತರ ಕೆಲವು ಉಲಮಾಗಳು ಹೇಳುವ ಪ್ರಕಾರ ಇದರ ಅರ್ಥ: ಓ ಅಲ್ಲಾಹ್! ನೀನು ನನ್ನೊಂದಿಗೆ ಮಾಡಿಕೊಂಡಿರುವ ಕರಾರಿಗೆ ನಾನು ಬದ್ಧನಾಗಿದ್ದೇನೆ ಮತ್ತು ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಾನು ನಿನ್ನ ಕರಾರನ್ನು ಪಾಲಿಸುತ್ತಿದ್ದೇನೆ. ಅಲ್ಲಾಹು ನಮ್ಮೊಂದಿಗೆ ಮಾಡಿಕೊಂಡಿರುವ ಕರಾರು ಏನೆಂದರೆ ನಾವು ವಿಶ್ವಾಸದಲ್ಲಿ ಅಚಲವಾಗಿ ನಿಲ್ಲಬೇಕು ಎಂಬುದು. ಇದನ್ನು ಅವನು ನಮಗೆ ಆಜ್ಞಾಪಿಸಿದ್ದಾನೆ. ಆದ್ದರಿಂದ ಈ ಪ್ರಾರ್ಥನೆಯನ್ನು ಪ್ರಾರ್ಥಿಸುವ ವ್ಯಕ್ತಿ ಹೇಳುವುದೇನೆಂದರೆ: ಓ ಅಲ್ಲಾಹ್! ವಿಶ್ವಾಸದಲ್ಲಿ

ಅಚಂಚಲವಾಗಿ ನಿಲ್ಲಬೇಕೆಂದು ನೀನು ನಮ್ಮೊಂದಿಗೆ ಮಾಡಿಕೊಂಡಿರುವ ಕರಾರಿಗೆ ನಾನು ಬದ್ಧನಾಗಿದ್ದೇನೆ, ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅದನ್ನು ಪಾಲಿಸಲು ಮತ್ತು ಅದಕ್ಕೆ ಶರಣಾಗಲು ನಾನು ಬದ್ಧನಾಗಿದ್ದೇನೆ.

**ಮಸ್ತತಅ್‌ತು** (ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ) ಎಂಬ ವಾಕ್ಯದಲ್ಲಿ ಮೇಲೆ ಹೇಳಿದ್ದೆಲ್ಲವನ್ನೂ ಮನುಷ್ಯನಿಗಿರುವ ಸಾಮರ್ಥ್ಯದೊಂದಿಗೆ ಜೋಡಿಸಲಾಗಿದೆ. ಅಂದರೆ ನನಗೆ ಸಾಮರ್ಥ್ಯವಿರುವಷ್ಟು ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತೇನೆ. ಇದು ಅಲ್ಲಾಹು ತನ್ನ ದಾಸರ ಮೇಲೆ ತೋರಿಸಿದ ಕರುಣೆಯಾಗಿದೆ.

ಈ ಹದೀಸಿನಲ್ಲಿರುವ **ಮಸ್ತತಅ್‌ತು** (ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ) ಎಂಬ ವಾಕ್ಯದ ಬಗ್ಗೆ ಕೆಲವು ಉಲಮಾಗಳು ಹೀಗೆನ್ನುತ್ತಾರೆ: ಇಲ್ಲಿ ಸಾಮರ್ಥ್ಯವನ್ನು ಜೋಡಿಸಿ ಹೇಳಿದ್ದರಲ್ಲಿ ಮನುಷ್ಯನ ಅಶಕ್ತತೆ ಮತ್ತು ಅಪೂರ್ಣತೆಯ ಅಂಗೀಕಾರವಿದೆ. ಅಂದರೆ ಈಮಾನನ್ನು ಪೂರ್ಣಗೊಳಿಸಲು, ಮತ್ತು ಅತ್ಯುನ್ನತವಾದ ಮತ್ತು ಪರಿಪೂರ್ಣವಾದ ರೂಪದಲ್ಲಿ ಅದನ್ನು ನಿರ್ವಹಿಸಲು ನನ್ನಿಂದ ಸಾಧ್ಯವಿಲ್ಲ. ನನ್ನ ಈ ಅಶಕ್ತತೆ ಮತ್ತು ಅಪೂರ್ಣತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ನನ್ನ ಅಶಕ್ತತೆ, ದೌರ್ಬಲ್ಯ ಮತ್ತು ಅಪೂರ್ಣತೆಗಾಗಿ ನೀನು ನನ್ನನ್ನು ಶಿಕ್ಷಿಸಬಾರದು.

ಅತ್ಯುನ್ನತನಾದ ಅಲ್ಲಾಹು ಕುರ್‌ಆನ್‌ನಲ್ಲಿ ಹೇಳುತ್ತಾನೆ:

﴿لَا يُكَلِّفُ ٱللَّهُ نَفۡسًا إِلَّا وُسۡعَهَاۚ﴾ [البقرة: 286] .

**“ಅಲ್ಲಾಹು ಯಾವುದೇ ಶರೀರಕ್ಕೂ ಅದರ ಸಾಮರ್ಥ್ಯಕ್ಕಿಂತ ಮಿಗಿಲಾದುದನ್ನು ಹೊರಿಸಲಾರನು.”** [ಕುರ್‌ಆನ್ 2:286]

ಹದೀಸೊಂದರಲ್ಲಿ ವರದಿಯಾಗಿರುವಂತೆ ತಾನು ಯಾವುದೇ ಶರೀರಕ್ಕೂ ಅದರ ಸಾಮರ್ಥ್ಯಕ್ಕಿಂತ ಹೆಚ್ಚಿನದನ್ನು ಹೊರಿಸುವುದಿಲ್ಲವೆಂದು ಅಲ್ಲಾಹು ಹೇಳಿದ್ದಾನೆ. (19)

ಇನ್ನೊಂದು ಸಹೀಹಾದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{إِذَا أَمَرْتُكُمْ بِأَمْرٍ فَأْتُوا مِنْهُ مَا اسْتَطَعْتُمْ، وَمَا نَهَيْتُكُمْ عَنْهُ فَانْتَهُوا}

مُتَّفَقٌ عَلَيهِ.

**"ನಾನು ನಿಮಗೆ ಏನನ್ನಾದರೂ ಮಾಡುವಂತೆ ಆಜ್ಞಾಪಿಸಿದರೆ ನಿಮಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅದನ್ನು ನಿರ್ವಹಿಸಲು ಪ್ರಯತ್ನಿಸಿರಿ. ಇನ್ನು ನಾನು ನಿಮಗೆ ಏನನ್ನಾದರೂ ಮಾಡಬಾರದೆಂದು ವಿರೋಧಿಸಿದರೆ ಅದನ್ನು ಪೂರ್ಣವಾಗಿ ವರ್ಜಿಸಿರಿ."** (20)

ಉಲಮಾಗಳು ಸ್ಪಷ್ಟಪಡಿಸಿದ ಒಂದು ವಿಷಯ ಈ ಹದೀಸಿನಲ್ಲಿದೆ. ಅದೇನೆಂದರೆ ಇಲ್ಲಿ ಆಜ್ಞೆಯನ್ನು ಸಾಮರ್ಥ್ಯದೊಂದಿಗೆ ಜೋಡಿಸಲಾಗಿದೆ. ಯಾಕೆಂದರೆ ಕೆಲವು ಆಜ್ಞೆಗಳನ್ನು ಪಾಲಿಸಲು ಮನುಷ್ಯನಿಗೆ ಸಾಧ್ಯವಿಲ್ಲ. ಅಥವಾ ಅವುಗಳನ್ನು ಪಾಲಿಸಲು ಸಾಧ್ಯವಿದ್ದರೂ ಪೂರ್ಣವಾದ ರೂಪದಲ್ಲಿ ಅವುಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ಆಜ್ಞೆಗಳನ್ನು ಸಾಮರ್ಥ್ಯದೊಂದಿಗೆ ಜೋಡಿಸಿ ಹೇಳಲಾಗಿರುವುದು ಈ ಕಾರಣದಿಂದಲೇ ಆಗಿದೆ. ಆದರೆ ವಿರೋಧವನ್ನು ಸಾಮರ್ಥ್ಯದೊಂದಿಗೆ ಜೋಡಿಸಿ ಹೇಳಲಾಗಿಲ್ಲ. **"ನಾನು ನಿಮಗೆ ಏನನ್ನಾದರೂ ಮಾಡಬಾರದೆಂದು ವಿರೋಧಿಸಿದರೆ ಅದನ್ನು**

---

[19] ಇದನ್ನು ಮುಸ್ಲಿಮ್ (180) ಇಬ್ನ್ ಅಬ್ಬಾಸ್(ﷺ)ರಿಂದ ವರದಿ ಮಾಡಿದ್ದಾರೆ.

[20] ಇದನ್ನು ಅಲ್‌ಬುಖಾರಿ (7288) ಮತ್ತು ಮುಸ್ಲಿಮ್ (2280) ಅಬೂ ಹುರೈರಃ(ﷺ)ರಿಂದ ವರದಿ ಮಾಡಿದ್ದಾರೆ.

**ಪೂರ್ಣವಾಗಿ ವರ್ಜಿಸಿರಿ”.** ನಿಮಗೆ ಸಾಧ್ಯವಾಗುವಷ್ಟರ ಮಟ್ಟಿಗೆ ವರ್ಜಿಸಲು ಪ್ರಯತ್ನಿಸಿರಿ ಎಂದು ಹೇಳಲಾಗಿಲ್ಲ. ಯಾಕೆಂದರೆ ಉಲಮಾಗಳು ಹೇಳುವ ಪ್ರಕಾರ ವರ್ಜಿಸುವುದು ಎಂದರೆ ಬಿಟ್ಟುಬಿಡುವುದು. ಬಿಟ್ಟುಬಿಡಲು ಎಲ್ಲರಿಗೂ ಸಾಧ್ಯವಿದೆ. ಉದಾಹರಣೆಗೆ, ವ್ಯಭಿಚಾರ, ಕಳ್ಳತನ, ಕೊಲೆ ಮುಂತಾದ ಅಲ್ಲಾಹು ಮತ್ತು ರಸೂಲ್(ﷺ) ವಿರೋಧಿಸಿದ ವಿಷಯಗಳನ್ನು ಬಿಟ್ಟುಬಿಡಲು ಪ್ರತಿಯೊಬ್ಬ ವ್ಯಕ್ತಿಗೂ ಸಾಧ್ಯವಿದೆ. ನನಗೆ ವ್ಯಭಿಚಾರವನ್ನು, ಅಥವಾ ಕಳ್ಳತನವನ್ನು, ಅಥವಾ ಕೊಲೆ ಮಾಡುವುದನ್ನು ಬಿಟ್ಟುಬಿಡಲು ಸಾಧ್ಯವಿಲ್ಲ ಎಂದು ಯಾರೂ ಹೇಳಲಾರರು. ಹಾಗೆ ಯಾರಾದರೂ ಹೇಳುವುದಿದ್ದರೆ ಅದು ದೇಹೇಚ್ಛೆಯನ್ನು ಅನುಸರಿಸುತ್ತಿರುವ ದುಷ್ಟ ವ್ಯಕ್ತಿ ಮಾತ್ರ. ಅಲ್ಲಾಹು ನಮ್ಮನ್ನು ಅಂತಹ ಜನರಿಂದ ಕಾಪಾಡಲಿ. ಈ ಕಾರಣದಿಂದಲೇ ವಿರೋಧಿಸಲ್ಪಟ್ಟ ವಿಷಯವನ್ನು ಸಾಮರ್ಥ್ಯದೊಂದಿಗೆ ಜೋಡಿಸಿ ಹೇಳಲಾಗಿಲ್ಲ.

**ಮಸ್ತತಅ್‌ತು** (ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ) ಎಂಬ ವಾಕ್ಯದಲ್ಲಿ ಮನುಷ್ಯನ ಮೇಲೆ ಅಲ್ಲಾಹು ಕಡ್ಡಾಯಗೊಳಿಸಿರುವ ಎಲ್ಲ ಕರ್ತವ್ಯಗಳನ್ನೂ ಪೂರ್ಣವಾದ ರೂಪದಲ್ಲಿ ನಿರ್ವಹಿಸಲು, ಅಲ್ಲಾಹನನ್ನು ಪೂರ್ಣ ರೂಪದಲ್ಲಿ ಅನುಸರಿಸಲು, ಅಲ್ಲಾಹನ ಅನುಗ್ರಹಗಳಿಗಾಗಿ ಪೂರ್ಣ ರೂಪದಲ್ಲಿ ಕೃತಜ್ಞತೆ ಸಲ್ಲಿಸಲು ಮನುಷ್ಯರಲ್ಲಿ ಯಾರಿಗೂ ಸಾಧ್ಯವಿಲ್ಲ ಎಂಬುದರ ಕಡೆಗೆ ಸೂಚನೆಯಿದೆ. ಈ ಕಾರಣದಿಂದಲೇ ಅಲ್ಲಾಹು ಮನುಷ್ಯರ ಮೇಲೆ ಅನುಕಂಪ ತೋರಿಸಿ ಅದನ್ನು ಸಾಮರ್ಥ್ಯದೊಂದಿಗೆ ಜೋಡಿಸಿದ್ದಾನೆ. ಆದ್ದರಿಂದ ಅಲ್ಲಾಹು ಆಜ್ಞಾಪಿಸಿದ ವಿಷಯಗಳನ್ನು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಪೂರ್ಣವಾಗಿ ನಿರ್ವಹಿಸಲು, ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಸತ್ಕರ್ಮಗಳಲ್ಲಿ ಮಗ್ನನಾಗಲು, ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅಲ್ಲಾಹನ ಅನುಗ್ರಹಗಳಿಗಾಗಿ ಅವನಿಗೆ ಕೃತಜ್ಞತೆ ಸಲ್ಲಿಸಲು, ಮತ್ತು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಈಮಾನನ್ನು

ನೈಜೀಕರಿಸಲು ಮನುಷ್ಯನು ಸತ್ಯಸಂಧವಾಗಿ ಪರಿಶ್ರಮಪಡಬೇಕು. ಯಾಕೆಂದರೆ ಕಣ್ಣುಗಳ ವಂಚನೆಯ ನೋಟಗಳನ್ನು ಮತ್ತು ಹೃದಯಗಳು ಅಡಗಿಸಿಡುವುದನ್ನೆಲ್ಲ ಅಲ್ಲಾಹು ಅರಿಯುತ್ತಾನೆ.

## ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ

{أَبُوءُ لَكَ بِنِعْمَتِكَ عَلَيَّ وَأَبُوءُ بِذَنْبِي}

**ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ** (ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ ಮತ್ತು ನನ್ನ ಸರ್ವ ಪಾಪಗಳನ್ನೂ ನಾನು ಒಪ್ಪಿಕೊಳ್ಳುತ್ತೇನೆ). **ಅಬೂಉ** ಅಂದರೆ ಅಂಗೀಕರಿಸುವುದು ಅಥವಾ ಒಪ್ಪಿಕೊಳ್ಳುವುದು. ಅಂದರೆ ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಎಲ್ಲ ಅನುಗ್ರಹಗಳನ್ನೂ ನಾನು ಅಂಗೀಕರಿಸುತ್ತೇನೆ ಮತ್ತು ಒಪ್ಪಿಕೊಳ್ಳುತ್ತೇನೆ. ನಿನ್ನನ್ನು ಅನುಗ್ರಹದಾತನೆಂದು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ನಾನು ಮಾಡಿದ ಸರ್ವ ಪಾಪಗಳ ಬಗ್ಗೆಯೂ ನಾನು ನಿನ್ನಲ್ಲಿ ತಪ್ಪೊಪ್ಪಿಕೊಳ್ಳುತ್ತೇನೆ. ಈ ವಾಕ್ಯದಲ್ಲಿ ಅನುಗ್ರಹದ ವೀಕ್ಷಣೆ ಮತ್ತು ಶರೀರ ಮತ್ತು ಕರ್ಮದ ಅಪೂರ್ಣತೆಯ ವಿಮರ್ಶೆಯಿದೆ. ಅಲ್ಲಾಹು ಅನುಗ್ರಹಿಸಿದ ಅನುಗ್ರಹಗಳನ್ನು ವೀಕ್ಷಿಸುವ ಮೂಲಕ ಅಲ್ಲಾಹನ ಮೇಲೆ ಪ್ರೀತಿಯು ಹೆಚ್ಚುತ್ತದೆ ಮತ್ತು ಅವನ ದಯಪಾಲಿಸಿದ ಅನುಗ್ರಹಗಳಿಗಾಗಿ ಮತ್ತು ಅವನ ಒದಗಿಸಿದ ಸಹಾಯಕ್ಕಾಗಿ ಅವನಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯವಾಗುತ್ತದೆ. ಅದೇ ರೀತಿ ತನ್ನ ಶರೀರವನ್ನು ಮತ್ತು ತನ್ನ ಕರ್ಮವನ್ನು ಸ್ವತಃ ವಿಮರ್ಶಿಸುವ ಮೂಲಕ

ಅಲ್ಲಾಹನ ಮುಂದೆ ವಿನಮ್ರನಾಗಲು, ಅವನ ಮುಂದೆ ತಪ್ಪೊಪ್ಪಿಕೊಳ್ಳಲು, ಅವನನ್ನೇ ಆಶ್ರಯಿಸಲು ಮತ್ತು ಪ್ರತಿಕ್ಷಣವೂ ಅವನೆಡೆಗೆ ಪಶ್ಚಾತ್ತಾಪ ಪಡಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಅಲ್ಲಾಹನನ್ನು ಅನುಗ್ರಹದಾತನನ್ನಾಗಿ ಕಾಣಲು ಮತ್ತು ತನ್ನ ಶರೀರವನ್ನು ಪಾಪಿಯನ್ನಾಗಿ, ದೋಷಿಯನ್ನಾಗಿ ಮತ್ತು ಅಪೂರ್ಣವಾಗಿ ಕಾಣಲು ಇದರಿಂದ ಸಾಧ್ಯವಾಗುತ್ತದೆ.

**ಬಿನಿಅ್‌ಮತಿಕ** (ನೀನು ಅನುಗ್ರಹಿಸಿದ ನಿನ್ನ ಅನುಗ್ರಹಗಳನ್ನು). ಇಲ್ಲಿ ಅಲ್ಲಾಹನ ಎಲ್ಲ ಅನುಗ್ರಹಗಳ ಬಗ್ಗೆಯೂ ಅಂಗೀಕಾರವಿದೆ. ಅಲ್ಲಾಹು ಅನುಗ್ರಹಿಸಿದ ಯಾವುದೋ ಒಂದು ನಿರ್ದಿಷ್ಟ ಅನುಗ್ರಹದ ಬಗ್ಗೆ ಮಾತ್ರ ಇಲ್ಲ ಪ್ರಸ್ತಾಪಿಸಿಲ್ಲ. ಬದಲಾಗಿ ಅಲ್ಲಾಹು ಅನುಗ್ರಹಿಸಿದ ಸರ್ವ ಅನುಗ್ರಹಗಳನ್ನೂ ಈ ವಾಕ್ಯ ಒಳಗೊಳ್ಳುತ್ತದೆ.

**ಬಿನಿಅ್‌ಮತಿಕ ಅಲಯ್ಯ** (ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಅನುಗ್ರಹಗಳನ್ನು). ಅಂದರೆ ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಪ್ರತಿಯೊಂದು ಅನುಗ್ರಹವನ್ನೂ –ಅವುಗಳಲ್ಲಿ ಒಂದನ್ನೂ ಬಿಟ್ಟುಬಿಡದೆ– ನಾನು ಅಂಗೀಕರಿಸುತ್ತೇನೆ ಮತ್ತು ಒಪ್ಪಿಕೊಳ್ಳುತ್ತೇನೆ. ಅನುಗ್ರಹಗಳೆಲ್ಲವೂ ಅನ್ಯೂನನೂ, ಅತ್ಯುನ್ನತನೂ ಆಗಿರುವ ಅಲ್ಲಾಹನಿಂದ ಮಾತ್ರ. ಅನುಗ್ರಹಗಳನ್ನು ದಯಪಾಲಿಸುವವನು ಮತ್ತು ಅದರ ಒಡೆಯನು ಅಲ್ಲಾಹು ಮಾತ್ರವೆಂದು ನಾನು ಒಪ್ಪಿಕೊಳ್ಳುತ್ತೇನೆ.

﴿وَمَا بِكُم مِّن نِّعۡمَةٖ فَمِنَ ٱللَّهِۖ﴾ [النحل: ٥٣].

**“ನಿಮ್ಮಲ್ಲಿ ಯಾವುದೇ ಅನುಗ್ರಹವಿದ್ದರೂ ಅದು ಅಲ್ಲಾಹನಿಂದಲೇ ಆಗಿದೆ.”** [ಕುರ್‌ಆನ್ 16:53]

ಆದ್ದರಿಂದ ಅನುಗ್ರಹಗಳೆಲ್ಲವೂ ಅಲ್ಲಾಹನ ಕಡೆಯಿಂದಲೇ ಆಗಿದೆ. **ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ** (ನೀನು ನನ್ನ ಮೇಲೆ ಅನುಗ್ರಹಿಸಿದ

ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ) ಎಂದು ದಾಸನು ಹೇಳುವಾಗ, ಅವನು ಅಲ್ಲಾಹು ಅನುಗ್ರಹಿಸಿದ ಸರ್ವ ಅನುಗ್ರಹಗಳನ್ನೂ ಒಪ್ಪಿಕೊಳ್ಳುತ್ತಾನೆ. ಅದು ಈಮಾನ್ ಎಂಬ ಅನುಗ್ರಹವಾಗಿರಲಿ, ಆರೋಗ್ಯವೆಂಬ ಅನುಗ್ರಹವಾಗಿರಲಿ, ಸಂತಾನವೆಂಬ ಅನುಗ್ರಹವಾಗಿರಲಿ, ಕೃಷಿಯೆಂಬ ಅನುಗ್ರಹವಾಗಿರಲಿ, ಮನೆಯೆಂಬ ಅನುಗ್ರಹವಾಗಿರಲಿ, ಅಥವಾ ಇತರ ಯಾವುದೇ ಅನುಗ್ರಹವಾಗಿರಲಿ, ಮನುಷ್ಯನಲ್ಲಿರುವ ಎಲ್ಲ ಅನುಗ್ರಹಗಳೂ ಅಲ್ಲಾಹನಿಂದಲೇ ಆಗಿದೆ. ಈ ಅನುಗ್ರಹಗಳನ್ನು ಅಂಗೀಕರಿಸಿ ಒಪ್ಪಿಕೊಳ್ಳುವಾಗ, ಅವುಗಳನ್ನು ದಯಪಾಲಿಸಿದ ಅನುಗ್ರಹದಾತನಾದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕೆಂಬುದನ್ನು ಅದು ಆವಶ್ಯಪಡುತ್ತದೆ.

ಮಹಾಮಹಿಮನಾದ ಅಲ್ಲಾಹು ಹೇಳುತ್ತಾನೆ:

﴿وَإِذۡ تَأَذَّنَ رَبُّكُمۡ لَئِن شَكَرۡتُمۡ لَأَزِيدَنَّكُمۡۖ وَلَئِن كَفَرۡتُمۡ إِنَّ عَذَابِي لَشَدِيدٞ ٧﴾ [إبراهيم: 7].

**“ನಿಮ್ಮ ರಬ್ಬ್ ಘೋಷಿಸಿದ ಸಂದರ್ಭವನ್ನು ಸ್ಮರಿಸಿರಿ: ನಾನು ದಯಪಾಲಿಸಿದ ಅನುಗ್ರಹಗಳಿಗಾಗಿ ನೀವು ನನಗೆ ಕೃತಜ್ಞತೆ ಸಲ್ಲಿಸುವುದಾದರೆ ನಾನು ನಿಮಗೆ ಅನುಗ್ರಹಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ದಯಪಾಲಿಸುವೆನು. ಮತ್ತು ನೀವು ನನ್ನ ಅನುಗ್ರಹಗಳನ್ನು ನಿಷೇಧಿಸಿ ನನಗೆ ಕೃತಘ್ನತೆ ತೋರಿಸುವುದಾದರೆ ಖಂಡಿತವಾಗಿಯೂ ನನ್ನ ಶಿಕ್ಷೆ ಅತಿಕಠೋರವಾಗಿದೆ.”** [ಕುರ್‌ಆನ್ 14:7]

ಅನುಗ್ರಹಗಳೆಲ್ಲವೂ ಅಲ್ಲಾಹನಿಂದ ಮಾತ್ರವಾಗಿದೆ, ಅನುಗ್ರಹಗಳನ್ನು ದಯಪಾಲಿಸುವುದು ಅವನು ಮಾತ್ರವಾಗಿದ್ದಾನೆ, ಅದರಲ್ಲಿ ಅವನಿಗೆ ಯಾವುದೇ ಸಹಭಾಗಿಗಳೋ ಪಾಲುದಾದರೋ ಇಲ್ಲವೆಂದು ದಾಸನು

ಒಪ್ಪಿಕೊಂಡರೆ ಆ ಅನುಗ್ರಹಗಳನ್ನು ದಯಪಾಲಿಸಿದ ಅಲ್ಲಾಹನಿಗೆ ಹೃದಯದಿಂದಲೂ, ನಾಲಗೆಯಿಂದಲೂ, ಕರ್ಮದಿಂದಲೂ ಕೃತಜ್ಞತೆ ಸಲ್ಲಿಸಬೇಕಾದುದು ಅನಿವಾರ್ಯವಾಗುತ್ತದೆ. ಅವನು ಅನುಗ್ರಹಿಸಿದ ಅನುಗ್ರಹಗಳಿಗಾಗಿ ಅವನನ್ನು ಸ್ತುತಿಸಬೇಕಾದುದು, ಆ ಅನುಗ್ರಹಗಳನ್ನು ಅವನ ಆಜ್ಞಾಪಾಲನೆ ಮಾಡುವುದರಲ್ಲಿ ವ್ಯಯಿಸಬೇಕಾದುದು ಮತ್ತು ಆ ಅನುಗ್ರಹಗಳನ್ನು ಅವನ ಆಜ್ಞೋಲ್ಲಂಘನೆ ಮಾಡುವುದರಲ್ಲಿ ವ್ಯಯಿಸದಿರುವುದು ಅನಿವಾರ್ಯವಾಗುತ್ತದೆ. ಮಾತ್ರವಲ್ಲ, ಅವನು ಕೇವಲ ಅಲ್ಲಾಹನೊಂದಿಗೆ ಮಾತ್ರ ಅನುಗ್ರಹಗಳನ್ನು ಬೇಡಿಕೊಳ್ಳಬೇಕೆಂಬು ದನ್ನೂ ಇದು ಅನಿವಾರ್ಯಗೊಳಿಸುತ್ತದೆ. **ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ** (ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ) ಎಂದು ದಾಸನು ಹೇಳುವಾಗ, ಅವನು ಮೇಲೆ ಹೇಳಿದವುಗಳನ್ನು ಪಾಲಿಸಬೇಕಾದುದು ಅತ್ಯಗತ್ಯವಾಗಿದೆ.

**ವಅಬೂಉ ಬಿದಮ್ಬೀ** (ಮತ್ತು ನಾನು ನನ್ನ ಪಾಪಗಳನ್ನು ಒಪ್ಪಿಕೊಳ್ಳುತ್ತೇನೆ). ಅಂದರೆ ನಾನು ಮಾಡಿದ ಪಾಪಗಳನ್ನು ನಾನು ಅಂಗೀಕರಿಸುತ್ತೇನೆ ಮತ್ತು ತಪ್ಪೊಪ್ಪಿಕೊಳ್ಳುತ್ತೇನೆ. ಈ ವಾಕ್ಯಕ್ಕೆ ಉಲಮಾಗಳು ಎರಡು ಅರ್ಥಗಳನ್ನು ಕೊಟ್ಟಿದ್ದಾರೆ:

**ಒಂದು:** ನೀನು ನನಗೆ ಅನುಗ್ರಹಿಸಿದ ನಿನ್ನ ಎಲ್ಲ ಅನುಗ್ರಹಗಳಿಗೂ ಪೂರ್ಣವಾದ ರೂಪದಲ್ಲಿ ಕೃತಜ್ಞತೆ ಸಲ್ಲಿಸದೆ ನಾನು ಪಾಪ ಮಾಡಿರುವೆ. ಆ ಪಾಪವನ್ನು ಒಪ್ಪಿಕೊಂಡು ನಾನು ನಿನ್ನೊಂದಿಗೆ ಕ್ಷಮೆ ಕೇಳುತ್ತಿದ್ದೇನೆ. **ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ** (ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ) ಎಂಬ ವಾಕ್ಯದ ನಂತರ ಈ ವಾಕ್ಯವನ್ನು ಹೇಳಿರುವುದರಿಂದ ಈ ವಾಕ್ಯಕ್ಕೆ ಈ ಅರ್ಥ ಬರುತ್ತದೆಂದು ಉಲಮಾಗಳು ಹೇಳುತ್ತಾರೆ. ಅಂದರೆ ನೀನು ಅನುಗ್ರಹಿಸಿದ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವ ವಿಷಯದಲ್ಲಿ ನಾನು ಅಪೂರ್ಣತೆಯನ್ನು

ಮಾಡಿದ್ದೇನೆ, ಕೊರತೆಯನ್ನು ಮಾಡಿದ್ದೇನೆ, ಮತ್ತು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಅಂಗೀಕರಿಸುತ್ತೇನೆ.

**ಎರಡು:** ನಾನು ಮಾಡಿದ ಸರ್ವ ಪಾಪಗಳನ್ನೂ ಸಂಪೂರ್ಣವಾಗಿ ನಾನು ಅಂಗೀಕರಿಸುತ್ತೇನೆ ಮತ್ತು ಒಪ್ಪಿಕೊಳ್ಳುತ್ತೇನೆ. ಅಂದರೆ ನಾನು ಮಾಡಿದ ಪಾಪಗಳನ್ನು, ತಪ್ಪುಗಳನ್ನು, ಆಜ್ಞೋಲ್ಲಂಘನೆಗಳನ್ನು, ನನ್ನಿಂದ ಸಂಭವಿಸಿದ ಸರ್ವ ಧಿಕ್ಕಾರ ಪ್ರವೃತ್ತಿಗಳನ್ನೂ ಎಲ್ಲವನ್ನೂ ನಾನು ನಿನ್ನ ಮುಂದೆ ಒಪ್ಪಿಕೊಳ್ಳುತ್ತೇನೆ.

ನಾನು ತಪ್ಪು ಮಾಡಿದ್ದೇನೆ, ಅಲ್ಲಾಹು ನನ್ನ ಮೇಲೆ ಕಡ್ಡಾಯಗೊಳಿಸಿದ ಕರ್ತವ್ಯಗಳನ್ನು ನಾನು ಸರಿಯಾಗಿ ನಿರ್ವಹಿಸಿಲ್ಲ ಎಂದು ದಾಸನು ಒಪ್ಪಿಕೊಳ್ಳುವುದು ಪಶ್ಚಾತ್ತಾಪದ ಮೊದಲ ಹಂತವಾಗಿದೆ. ತನ್ನ ಕೊರತೆಗಳನ್ನು ಮತ್ತು ಅಪೂರ್ಣತೆಗಳನ್ನು ಒಪ್ಪಿಕೊಳ್ಳುವುದು ಪಶ್ಚಾತ್ತಾಪ ಪಡುವುದಕ್ಕಿರುವ ದ್ವಾರವಾಗಿದೆ. ಆದರೆ ಪಾಪಗಳನ್ನು ಮತ್ತು ತಪ್ಪುಗಳನ್ನು ಮಾಡಿ, ಮಾತ್ರವಲ್ಲ ಮಹಾಪಾಪಗಳನ್ನು ಕೂಡ ಮಾಡಿ, ತನ್ನಿಂದ ತಪ್ಪುಂಟಾಗಿದೆ, ತಾನು ಪಾಪ ಮಾಡಿದ್ದೇನೆ, ತಾನೊಬ್ಬ ದೋಷಿ ಎಂಬ ಪ್ರಜ್ಞೆಯಾಗಲಿ, ಭಾವನೆಯಾಗಲಿ ಇಲ್ಲದವನಿಗೆ ಪಶ್ಚಾತ್ತಾಪವೋ ವಿಷಾದವೋ ಉಂಟಾಗುವುದಿಲ್ಲ. ಅಂತಹವನಿಗೆ ಪಶ್ಚಾತ್ತಾಪ ಪಡುವ ಅಥವಾ ತೌಬಾ ಮಾಡುವ ತೌಫೀಕ್ ಕೂಡ ಲಭ್ಯವಾಗುವುದಿಲ್ಲ.

**ವಅಬೂಉ ಬಿದಮ್ಬೀ** (ಮತ್ತು ನಾನು ನನ್ನ ಪಾಪಗಳನ್ನು ಒಪ್ಪಿಕೊಳ್ಳುತ್ತೇನೆ) ಎಂಬ ವಾಕ್ಯಕ್ಕೆ ಉಲಮಾಗಳು ಈ ಮೇಲಿನ ಎರಡು ಅರ್ಥಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಎರಡನೆ ಅರ್ಥವು ಸತ್ಯಕ್ಕೆ ಹೆಚ್ಚು ಹತ್ತಿರದಲ್ಲಿದೆ. ಯಾಕೆಂದರೆ ಇಸ್ತಿಗ್ಫಾರ್ ಮಾಡುವುದರ ಮುಖ್ಯ ಉದ್ದೇಶವೇ ತನ್ನ ಕೊರತೆ ಮತ್ತು ಅಪೂರ್ಣತೆಗಳನ್ನು ಒಪ್ಪಿಕೊಂಡು ಪಶ್ಚಾತ್ತಾಪಪಡುವುದು ಮತ್ತು ತನ್ನಿಂದ ಸಂಭವಿಸಿದ ಪಾಪಗಳನ್ನು ನೆನೆದು

ಪಶ್ಚಾತ್ತಾಪಪಡುವುದು. ಈ ಹದೀಸಿನ ಆಶಯ ಮತ್ತು ಮುಖ್ಯ ಉದ್ದೇಶ ಕೂಡ ಇದೇ ಆಗಿದೆ.

**ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ** (ನೀನು ನನ್ನ ಮೇಲೆ ಅನುಗ್ರಹಿಸಿದ ನಿನ್ನ ಸರ್ವ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ ಮತ್ತು ನನ್ನ ಸರ್ವ ಪಾಪಗಳನ್ನೂ ಒಪ್ಪಿಕೊಳ್ಳುತ್ತೇನೆ) ಎಂಬ ವಾಕ್ಯದಲ್ಲಿ ಉಲಮಾಗಳು ಪ್ರಸ್ತಾಪಿಸಿದ ಒಂದು ವಿಷಯದೆಡೆಗೆ ಸೂಚನೆಯಿದೆ. ಅದೇನೆಂದರೆ ದಾಸನು ಈ ಐಹಿಕ ಜೀವನದಲ್ಲಿ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಎರಡು ವಿಷಯಗಳ ನಡುವೆ ಚಲಿಸುತ್ತಿರುತ್ತಾನೆ. **ಒಂದು:** ಅಲ್ಲಾಹನಿಂದ ಲಭ್ಯವಾಗುವ ಹೊಸದೊಂದು ಅನುಗ್ರಹ. ಈ ಅನುಗ್ರಹ ಲಭ್ಯವಾಗುವಾಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕಾದುದು ಅತ್ಯಗತ್ಯ. **ಇನ್ನೊಂದು:** ಯಾವುದಾದರೊಂದು ವಿಷಯದಲ್ಲಿ ದಾಸನು ತೋರುವ ಕೊರತೆ ಅಥವಾ ಅಪೂರ್ಣತೆ. ಈ ಕೊರತೆ ಅಥವಾ ಅಪೂರ್ಣತೆ ಸಂಭವಿಸಿದಾಗ ಅಲ್ಲಾಹನಲ್ಲಿ ಇಸ್ತಿಗ್ಫಾರ್ ಮಾಡುವುದು ಅತ್ಯಗತ್ಯ. ಈ ಹದೀಸ್ ಈ ಎರಡು ವಿಷಯಗಳನ್ನು ಬೆಸೆದುಕೊಂಡಿದೆ. ಈ ಕಾರಣದಿಂದಲೇ ಸಲಫ್‌ಗಳ ಪೈಕಿ ಕೆಲವರು ಹೇಳುತ್ತಿದ್ದರು:

**"ನಾನು ಒಂದು ಅನುಗ್ರಹ ಮತ್ತು ಪಾಪದೊಂದಿಗೆ ಬೆಳಗನ್ನು ಪ್ರವೇಶಿಸುತ್ತೇನೆ. ಆ ಅನುಗ್ರಹಕ್ಕಾಗಿ ಕೃತಜ್ಞತೆ ಸಲ್ಲಿಸಲು ಮತ್ತು ಆ ಪಾಪಕ್ಕಾಗಿ ಇಸ್ತಿಗ್ಫಾರ್ ಮಾಡಲು ನಾನು ಬಯಸುತ್ತೇನೆ."** (21)

ಈ ಹದೀಸಿನಿಂದ ಲಭ್ಯವಾಗುವ ಇನ್ನೊಂದು ಪ್ರಯೋಜನವಿದೆ. ಅದೇನೆಂದರೆ, ಯಾರು ತನ್ನ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಡುತ್ತಾನೋ ಅವನ ಪಶ್ಚಾತ್ತಾಪವನ್ನು (ತೌಬಾವನ್ನು) ಅಲ್ಲಾಹು ಸ್ವೀಕರಿಸಿ

---

[21] ಇದನ್ನು ಇಬ್ನ್ ತೈಮಿಯ್ಯಃ ತಮ್ಮ 'ಜಾಮಿಉರ್‍ರಸಾಇಲ್'ನಲ್ಲಿ (1/116) ಮತ್ತು ಇಬ್ನುಲ್ ಕಯ್ಯಿಮ್ ತಮ್ಮ 'ತರೀಕುಲ್ ಹಿಜ್ರತೈನಿ'ಯಲ್ಲಿ (ಪುಟ 170) ಪ್ರಸ್ತಾಪಿಸಿದ್ದಾರೆ.

ಅವನಿಗೆ ಕ್ಷಮಿಸುತ್ತಾನೆ. ಪಾಪ ಎಷ್ಟೇ ದೊಡ್ಡದಾಗಿರಲಿ, ದಾಸನು ಅದನ್ನು ಒಪ್ಪಿಕೊಂಡು, ನಾನೊಬ್ಬ ಪಾಪಿ, ನಾನೊಬ್ಬ ದೋಷಿ, ನಾನು ನನ್ನ ಪಾಪವನ್ನು ಒಪ್ಪಿಕೊಳ್ಳುತ್ತೇನೆ, ಅಂಗೀಕರಿಸುತ್ತೇನೆ, ಆದ್ದರಿಂದ ನನ್ನನ್ನು ಕ್ಷಮಿಸು, ಯಾಕೆಂದರೆ ನೀನಲ್ಲದೆ ಕ್ಷಮಿಸುವ ಅರ್ಹತೆಯನ್ನು ಹೊಂದಿರುವವರಾರೂ ಇಲ್ಲ ಎಂದು ದಾಸನು ಹೇಳುವಾಗ ಅಲ್ಲಾಹು ಅವನನ್ನು ಕ್ಷಮಿಸುತ್ತಾನೆ. ಆದ್ದರಿಂದ ಯಾರಾದರೂ ಈ ಎರಡು ವಿಷಯಗಳನ್ನು ನಿರ್ವಹಿಸಿದರೆ, ಅಂದರೆ ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಮತ್ತು ಅದಕ್ಕಾಗಿ ಪಶ್ಚಾತ್ತಾಪ ಪಡುವುದು ಎಂಬ ಈ ಎರಡು ವಿಷಯಗಳನ್ನು ನಿರ್ವಹಿಸಿದರೆ, ಅಲ್ಲಾಹು ಅವನನ್ನು ಕ್ಷಮಿಸುತ್ತಾನೆ. ಈ ಹದೀಸಿನಲ್ಲಿ ಸೂಚನಾತ್ಮಕವಾಗಿ ಹೇಳಲಾದ ಈ ವಿಚಾರವು ಇನ್ನೊಂದು ಹದೀಸಿನಲ್ಲಿ ಸ್ಪಷ್ಟವಾಗಿ ವರದಿಯಾಗಿದೆ.

{فَإِنَّ الْعَبْدَ إِذَا اعْتَرَفَ بِذَنْبِهِ ثُمَّ تَابَ تَابَ اللَّهُ عَلَيْهِ} مُتَّفَقٌ عَلَيهِ.

**“ಖಂಡಿತವಾಗಿಯೂ ದಾಸನು ತನ್ನ ಪಾಪವನ್ನು ಒಪ್ಪಿಕೊಂಡು ತರುವಾಯ ಪಶ್ಚಾತ್ತಾಪ ಪಟ್ಟರೆ, ಅಲ್ಲಾಹು ಅವನ ಪಶ್ಚಾತ್ತಾಪವನ್ನು ಸ್ವೀಕರಿಸಿ ಅವನಿಗೆ ಕ್ಷಮಿಸುವನು.”** (22)

## ಫಇನ್ನಹೂ ಲಾ ಯಗ್ಫಿರು ದ್ದುನೂಬ ಇಲ್ಲಾ ಅನ್ತ

{فَإِنَّهُ لَا يَغْفِرُ الذُّنُوبَ إِلَّا أَنْتَ}

[22] ಇದನ್ನು ಅಲ್‌ಬುಖಾರಿ (2661, 4141) ಮತ್ತು ಮುಸ್ಲಿಮ್ (4974) ಆಯಿಶಾ(ﷺ)ರಿಂದ ವರದಿ ಮಾಡಿದ್ದಾರೆ.

ನಂತರ ಹದೀಸಿನ ಕೊನೆಯಲ್ಲಿ **ಫಇನ್ನಹೂ ಲಾ ಯಗ್ಫಿರು ದ್ದುನೂಬ ಇಲ್ಲಾ ಅನ್ತ** (ಯಾಕೆಂದರೆ ಖಂಡಿತವಾಗಿಯೂ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರಾರೂ ಇಲ್ಲ) ಎಂದು ಹೇಳಲಾಗಿದೆ. ಇದು ಪಾಪಗಳನ್ನು ಕ್ಷಮಿಸುವ ಅಧಿಕಾರ ಮತ್ತು ಅರ್ಹತೆಯಿರುವುದು ಅಲ್ಲಾಹನಿಗೆ ಮಾತ್ರ ಎಂಬುದರ ಅಂಗೀಕಾರವಾಗಿದೆ. ದಾಸರ ಪಶ್ಚಾತ್ತಾಪವನ್ನು ಸ್ವೀಕರಿಸಿ ಅವರನ್ನು ಕ್ಷಮಿಸುವವನು ಅಲ್ಲಾಹು ಮಾತ್ರ. ಈ ಕಾರಣದಿಂದಲೇ ಪಶ್ಚಾತ್ತಾಪದೊಂದಿಗೆ, ಇಸ್ತಿಗ್ಫಾರ್‌ನೊಂದಿಗೆ, ತೌಬಾದೊಂದಿಗೆ, ಕ್ಷಮೆಯನ್ನು ಅರಸುತ್ತಾ ತಿರುಗಬೇಕಾದುದು ಅಲ್ಲಾಹನ ಕಡೆಗೆ ಮಾತ್ರವಾಗಿದೆ. ಯಾಕೆಂದರೆ ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವವರಾರೂ ಇಲ್ಲ.

﴿وَمَن يَغۡفِرُ ٱلذُّنُوبَ إِلَّا ٱللَّهُ﴾ [آل عمران: 135] .

**"ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವ ಅಧಿಕಾರವನ್ನು ಹೊಂದಿರುವವರು ಯಾರು?"** [ಕುರ್‌ಆನ್ 3:135]

# ಹದೀಸಿನ ಪ್ರಯೋಜನಗಳು

ಎರಡು ಮಹಾ ವಿಷಯಗಳನ್ನು, ಅಂದರೆ ತೌಹೀದ್ ಮತ್ತು ಇಸ್ತಿಗ್ಫಾರನ್ನು, ಈ ಹದೀಸಿನಲ್ಲಿ ಜೊತೆಯಾಗಿ ಬೆಸೆಯಲಾಗಿದೆ. ಈ ಎರಡು ವಿಷಯಗಳು ಮಹತ್ವವಿರುವ ಮತ್ತು ಪ್ರಾಮುಖ್ಯತೆಯಿರುವ ವಿಷಯಗಳು. ಈ ಹದೀಸ್ ಇವೆರಡನ್ನೂ ಬೆಸೆದಿದೆ. ಇದೇ ರೀತಿ ಈ ಎರಡು ವಿಷಯಗಳನ್ನು ಬೆಸೆದುಕೊಂಡಿರುವ ಅನೇಕ ಆಯತ್‌ಗಳನ್ನು ಮತ್ತು ಹದೀಸ್‌ಗಳನ್ನು ಕಾಣಬಹುದು.

ಅಲ್ಲಾಹು ಹೇಳುತ್ತಾನೆ:

﴿فَٱعْلَمْ أَنَّهُۥ لَآ إِلَٰهَ إِلَّا ٱللَّهُ وَٱسْتَغْفِرْ لِذَنۢبِكَ وَلِلْمُؤْمِنِينَ وَٱلْمُؤْمِنَٰتِ ۗ وَٱللَّهُ يَعْلَمُ مُتَقَلَّبَكُمْ وَمَثْوَىٰكُمْ ١٩﴾ [محمد: 19] .

**“ಅರಿಯಿರಿ! ಆರಾಧಿಸಲ್ಪಡುವ ಹಕ್ಕು ಅಲ್ಲಾಹನ ಹೊರತು ಇನ್ನಾರಿಗೂ ಇಲ್ಲವೆಂದು, ಮತ್ತು ತಮ್ಮ ಪಾಪಗಳಿಗಾಗಿ ಮತ್ತು ವಿಶ್ವಾಸಿ ವಿಶ್ವಾಸಿನಿಗಳಿಗಾಗಿ ಇಸ್ತಿಗ್ಫಾರ್ ಮಾಡಿರಿ. ಯಾಕೆಂದರೆ ನೀವು ಎಚ್ಚರದಲ್ಲಿರುವಾಗ ಮತ್ತು ಮಲಗಿಕೊಂಡಿರುವಾಗ ನೀವು ಮಾಡುವ ಎಲ್ಲ ಪ್ರವೃತ್ತಿಗಳ ಬಗ್ಗೆ ಅಲ್ಲಾಹು ಚೆನ್ನಾಗಿ ಅರಿಯುತ್ತಿದ್ದಾನೆ.”** [ಕುರ್‌ಆನ್ 47:19]

ಈ ಆಯತ್ತಿನಲ್ಲಿ ತೌಹೀದ್ ಮತ್ತು ಇಸ್ತಿಗ್ಫಾರನ್ನು ಜೊತೆಯಾಗಿ ಬೆಸೆಯಲಾಗಿದೆ. ಅದೇ ರೀತಿ ಅಲ್ಲಾಹು ಕುರ್‌ಆನ್‌ನಲ್ಲಿ ಉದ್ಧರಿಸಿದ ದುನ್ನೂನ್ (ಯೂನುಸ್)(ﷺ)ರವರ ಮಾತಿನಲ್ಲೂ ಇದನ್ನು ಕಾಣಬಹುದು:

﴿فَنَادَىٰ فِى ٱلظُّلُمَٰتِ أَن لَّآ إِلَٰهَ إِلَّآ أَنتَ سُبْحَٰنَكَ إِنِّى كُنتُ مِنَ ٱلظَّٰلِمِينَ ٨٧﴾ [الأنبياء: 87] .

**“ಅವರು (ಯೂನುಸ್) ಅಂಧಕಾರದಲ್ಲಿ ಕೂಗಿದರು: ಆರಾಧಿಸಲ್ಪಡುವ ಹಕ್ಕು ನಿನ್ನ ಹೊರತು ಅನ್ಯರಿಗಿಲ್ಲ, ನೀನು ಯಾವುದೇ ನ್ಯೂನತೆಯಿಲ್ಲದ ಪರಿಪೂರ್ಣನು, ಖಂಡಿತವಾಗಿಯೂ ನಾನು ಅನ್ಯಾಯವೆಸಗಿದವರಲ್ಲಿ ಸೇರಿದವನಾಗಿರುವೆನು.”** [ಕುರ್‌ಆನ್ 21:87]

ಇದೇ ರೀತಿ ಇನ್ನೂ ಅನೇಕ ಆಯತ್ ಮತ್ತು ಹದೀಸ್‌ಗಳಲ್ಲಿ ಇವೆರಡು ವಿಷಯಗಳನ್ನು ಜೊತೆಯಾಗಿ ಬೆಸೆದಿರುವುದನ್ನು ಕಾಣಬಹುದು. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ: “ಪೂರ್ಣ ಸತ್ಯಸಂಧತೆಯೊಂದಿಗೆ ಮತ್ತು ಪೂರ್ಣ ದೃಢವಿಶ್ವಾಸದೊಂದಿಗೆ ಲಾ ಇಲಾಹ

ಇಲ್ಲಲ್ಲಾಹ್ ಎಂಬ ಸಾಕ್ಷಿವಚನವನ್ನು ಉಚ್ಛರಿಸಿದರೆ ಅದು ಸರ್ವ ರೀತಿಯ ಶಿರ್ಕ್‌ಗಳನ್ನೂ, ಅದರಲ್ಲಿ ಸೇರಿದ ಚಿಕ್ಕದ್ದನ್ನೂ, ದೊಡ್ಡದ್ದನ್ನೂ, ಅರಿತು ಮಾಡಿದ್ದನ್ನೂ ಅರಿಯದೆ ಮಾಡಿದ್ದನ್ನೂ, ಮೊದಲು ಮಾಡಿದ್ದನ್ನೂ ಕೊನೆಯಲ್ಲಿ ಮಾಡಿದ್ದನ್ನೂ, ರಹಸ್ಯವಾಗಿ ಮಾಡಿದ್ದನ್ನೂ ಬಹಿರಂಗವಾಗಿ ಮಾಡಿದ್ದನ್ನೂ, ಎಲ್ಲವನ್ನೂ ಅಳಿಸಿಹಾಕುತ್ತದೆ. ಅದರಲ್ಲಿ ಸೇರಿದ ಅತ್ಯಂತ ರಹಸ್ಯವಾಗಿರುವುದನ್ನೂ, ಅತ್ಯಂತ ಸೂಕ್ಷ್ಮವಾಗಿರುವುದನ್ನೂ ಅಳಿಸಿಹಾಕುತ್ತದೆ. ಇನ್ನು ಅದರಲ್ಲಿ ಚೂರುಪಾರು ಏನಾದರೂ ಉಳಿದಿದ್ದರೆ ಅದನ್ನು ಇಸ್ತಿಗ್ಫಾರ್ ಅಳಿಸಿಹಾಕುತ್ತದೆ. ಶಿರ್ಕಿನ ಗೆಲ್ಲುಗಳಲ್ಲಿ ಸೇರಿದ ಎಲ್ಲ ಪಾಪಗಳನ್ನೂ ಇಸ್ತಿಗ್ಫಾರ್ ಅಳಿಸಿಹಾಕುತ್ತದೆ. ಯಾಕೆಂದರೆ ಪಾಪಗಳೆಲ್ಲವೂ ಶಿರ್ಕಿನ ಗೆಲ್ಲುಗಳಲ್ಲಿ ಸೇರಿದವುಗಳು. ಶಿರ್ಕಿನ ಬೇರನ್ನು ತೌಹೀದ್ ಅಳಿಸಿಹಾಕಿದರೆ, ಅದರ ಗೆಲ್ಲುಗಳನ್ನು ಇಸ್ತಿಗ್ಫಾರ್ ಅಳಿಸಿಹಾಕುತ್ತದೆ. ಆದ್ದರಿಂದ ಲಾಇಲಾಹ ಇಲ್ಲಲ್ಲಾಹ್ ಎಂಬ ವಚನವು ಸಮಗ್ರವಾದ ಪ್ರಶಂಸೆಯಾದರೆ ಅಸ್ತಗ್ಫಿರುಲ್ಲಾಹ್ ಎಂಬ ವಚನವು ಸಮಗ್ರವಾದ ಪ್ರಾರ್ಥನೆಯಾಗಿದೆ.” [23]

## ಸಮಾಪ್ತಿ

ಕೊನೆಯದಾಗಿ, ಈ ಹದೀಸ್ ಅನೇಕ ಮಹತ್ವಪೂರ್ಣ ಅರ್ಥಗಳನ್ನು ಮತ್ತು ಉನ್ನತ ಉದ್ದೇಶಗಳನ್ನು ಹೊಂದಿದೆಯೆಂದು ಈ ಮೇಲಿನ ವಿವರಣೆಗಳಿಂದ ನಾವು ತಿಳಿದುಕೊಂಡೆವು. ಈ ಪ್ರಾರ್ಥನೆಯನ್ನು ಪ್ರವಾದಿ(ﷺ)ರವರು **ಸಯ್ಯಿದುಲ್ ಇಸ್ತಿಗ್ಫಾರ್** (ಇಸ್ತಿಗ್ಫಾರ್

[23] ಮಜ್ಮೂಉಲ್ ಫತಾವಾ 11/696–697

ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನ) ಎಂದು ವರ್ಣಿಸಿದ್ದಾರೆ. ಇದಕ್ಕಿರುವ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ಅಲ್ಲಾಹು ಮಾತ್ರ ಆರಾಧಿಸಲ್ಪಡಲು ಅರ್ಹನು ಮತ್ತು ಸೃಷ್ಟಿಗಳೆಲ್ಲರೂ ಅವನ ದಾಸರು ಎಂಬ ಅಂಗೀಕಾರವು ಇದರಲ್ಲಿದೆ.

2. ಸೃಷ್ಟಿಕರ್ತ ಅಲ್ಲಾಹು ಮಾತ್ರ ಎಂಬ ಅಂಗೀಕಾರವು ಇದರಲ್ಲಿದೆ.

3. ಅಲ್ಲಾಹು ಅವನ ದಾಸರಿಂದ ಒಂದು ಕರಾರು ಪಡೆದುಕೊಂಡಿದ್ದಾನೆ ಎಂಬುದರ ದೃಢೀಕರಣವು ಇದರಲ್ಲಿದೆ.

4. ಅಲ್ಲಾಹು ಅವನ ದಾಸರಿಗೆ ಮಾಡಿದ ವಾಗ್ದಾನವನ್ನು ಅವನು ನೆರವೇರಿಸುತ್ತಾನೆ ಎಂಬ ಶುಭನಿರೀಕ್ಷೆ ಇದರಲ್ಲಿದೆ.

5. ಕರ್ಮಗಳಿಂದ ಉದ್ಭವಿಸುವ ಕೆಡುಕುಗಳ ಬಗ್ಗೆ ಅಲ್ಲಾಹನಲ್ಲಿ ರಕ್ಷೆ ಬೇಡುವುದು ಇದರಲ್ಲಿದೆ.

6. ಅನುಗ್ರಹಗಳನ್ನು ಅಲ್ಲಾಹನಿಗೆ ಸೇರಿಸಿ ಹೇಳಲಾಗಿರುವುದರಿಂದ ಅವನು ಮಾತ್ರವೇ ಅನುಗ್ರಹದಾತನು ಎಂಬ ಅಂಗೀಕಾರವು ಇದರಲ್ಲಿದೆ.

7. ಪಾಪ ಮತ್ತು ದೋಷಗಳನ್ನು ಮನುಷ್ಯನಿಗೆ ಸೇರಿಸಿ ಹೇಳಲಾಗಿದೆ.

8. ಅಲ್ಲಾಹು ಕ್ಷಮಿಸುತ್ತಾನೆ ಎಂಬ ಆಕಾಂಕ್ಷೆ ಇದರಲ್ಲಿದೆ. ಕ್ಷಮಿಸುವ ಅರ್ಹತೆ ಮತ್ತು ಅಧಿಕಾರವನ್ನು ಹೊಂದಿರುವವನು ಅಲ್ಲಾಹು ಮಾತ್ರ ಎಂಬ ಅಂಗೀಕಾರ ಇದರಲ್ಲಿದೆ.

ಒಟ್ಟಿನಲ್ಲಿ, ನಾವು ಈ ಹದೀಸಿಗೆ ವಿಶೇಷ ಪ್ರಾಮುಖ್ಯತೆ ನೀಡಬೇಕು. ಇದನ್ನು ಕಂಠಪಾಠ ಮಾಡಿ ದಿನನಿತ್ಯ ಬೆಳಗ್ಗೆ ಮತ್ತು ಸಂಜೆ ಹೇಳುತ್ತಿರಬೇಕು. ಈ ಪ್ರಾರ್ಥನೆಯು ಭಿನ್ನ ಪದಗಳಲ್ಲಿ

ವರದಿಯಾಗಿರುವುದರಿಂದ ನಾವು ಇಲ್ಲಿ ಉಲ್ಲೇಖಿಸಿದ ಪದಗಳಲ್ಲಿ ಕಂಠಪಾಠ ಮಾಡುವುದು ಉತ್ತಮ. ಯಾಕೆಂದರೆ ಅದು ಸಹೀಹುಲ್ ಬುಖಾರಿಯಲ್ಲಿ ವರದಿಯಾಗಿರುವ ಪದಗಳು. ನಾವು ಈ ಪದಗಳನ್ನು ಕಂಠಪಾಠ ಮಾಡಿ ಬೆಳಗ್ಗೆ ಫಜ್ರ್ ನಮಾಝ್ ನಿರ್ವಹಿಸಿದ ಬಳಿಕ ಮತ್ತು ಸಂಜೆ ಸೂರ್ಯೋದಯಕ್ಕೆ ಮುಂಚೆ ಅಥವಾ ನಂತರ ಹೇಳಬೇಕು.

ಈ ದಿಕ್ರನ್ನು ಮತ್ತು ಇತರೆಲ್ಲ ದಿಕ್ರ್‌ಗಳನ್ನು ದಿನನಿತ್ಯ ಹೇಳಲು ಹಾಗೂ ಇತರ ಸತ್ಕರ್ಮಗಳನ್ನು ನಿರ್ವಹಿಸಲು ನಮಗೆ ಸಹಾಯ ಮಾಡುವಂತೆ ಅತಿಉದಾರಿಯೂ, ಮಹಾ ಸಿಂಹಾಸನದ ಒಡೆಯನೂ ಆಗಿರುವ ಅಲ್ಲಾಹನೊಂದಿಗೆ ಅವನ ಅತಿಸುಂದರವಾದ ಹೆಸರುಗಳ ಮತ್ತು ಅತ್ಯುನ್ನತವಾದ ವಿಶೇಷಣಗಳ ಮೂಲಕ ಬೇಡುತ್ತಿದ್ದೇನೆ. ನಮ್ಮ ಕೊನೆಯ ಪ್ರಾರ್ಥನೆ: ಸರ್ವಲೋಕಗಳ ರಬ್ಬ್ ಆಗಿರುವ ಅಲ್ಲಾಹನಿಗೆ ಸರ್ವಸ್ತುತಿ.

ಅಲ್ಲಾಹು ಅವನ ದಾಸರೂ, ರಸೂಲರೂ ಆಗಿರುವ ನಮ್ಮ ಪ್ರವಾದಿ ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಸಲಾತ್, ಸಲಾಮ್, ಬರಕತ್ ಮತ್ತು ನಿಅ್‌ಮತ್‌ಗಳನ್ನು ಸುರಿಸಲಿ. ಆಮೀನ್.

******

# ಒಳಪುಟಗಳಲ್ಲಿ


| م | العنوان | الصفحة |
|---|---|---|
| 1 | ಪ್ರಸ್ತಾವನೆ | **1** |
| 2 | ಇಸ್ತಿಗ್ಫಾರ್ ಮಾಡುವುದರ ಶ್ರೇಷ್ಠತೆಗಳು | **2** |
| 3 | ಅತಿಸುಂದರವಾದ ಹೆಸರುಗಳ ಮೂಲಕ ಅಲ್ಲಾಹನಲ್ಲಿ ಪ್ರಾರ್ಥಿಸುವುದು | **9** |
| 4 | ಪಾಪಗಳು ಕ್ಷಮಿಸಲ್ಪಡುವುದಕ್ಕಿರುವ ನಿಬಂಧನೆಗಳು | **12** |
| 5 | ಇಸ್ತಿಗ್ಫಾರ್ ಮಾಡುವುದಕ್ಕಿರುವ ಅತಿಶ್ರೇಷ್ಠ ವಿಧಾನ | **15** |
| 6 | ಅಲ್ಲಾಹುಮ್ಮ | **21** |
| 7 | ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್‌ತನೀ ವಅನ ಅಬ್ದುಕ | **22** |
| 8 | ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು | **34** |
| 9 | ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ | **39** |
| 10 | ಫಇನ್ನಹೂ ಲಾ ಯಗ್ಫಿರು ದ್ದುನೂಬ ಇಲ್ಲಾ ಅನ್ತ | **46** |
| 11 | ಹದೀಸಿನ ಪ್ರಯೋಜನಗಳು | **47** |
| 12 | ಸಮಾಪ್ತಿ | **49** |